ಸಂಪುಟ/Volume : 43
ಸಂಚಿಕೆ/Issue : 2
ಪುಟ/Pages : 12
ಬೆಲೆ/Price : ₹ 10/–

ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ನವೆಂಬರ್ 2020 ಮಾಸ ಪತ್ರಿಕೆ

Akhila Karnataka Shikshaka Samachar | November 2020 | Monthly




A Journal of Karnataka Rajya Madhyamika Shikshaka Sangha (R.)

# ನವೆಂಬರ್ ಸಂಕಲ್ಪ



**ನಂ. ನಾಗಲಕ್ಷ್ಮಿ**
**ನಿವೃತ್ತ ಕನ್ನಡ ಉಪನ್ಯಾಸಕರು,**
**ಸರ್ಕಾರಿ ಪ.ಪೂ. ಕಾಲೇಜು,**
**ಬೆಂಗಳೂರು**

ಒಂದು ಕಾಲದಲ್ಲಿ ಅಂದರೆ, ನನಗೆ ನೆನಪಿರುವಂತೆ ಸುಮಾರು ಅರವತ್ತು, ಎಪ್ಪತ್ತರ ದಶಕಗಳಲ್ಲಿ ಬೆಂಗಳೂರು ಆಕಾಶವಾಣಿಯಿಂದ ಪ್ರಸಾರವಾಗುತ್ತಿದ್ದ ಕನ್ನಡ ವಾರ್ತೆಗಳನ್ನು ಕೇಳುತ್ತಿದ್ದರೆ ಅದೆಷ್ಟು ಸೊಗಸಾದ ಭಾಷೆ ನಮ್ಮ ಕನ್ನಡ ಅನಿಸುತ್ತಿತ್ತು. ದೂರದರ್ಶನ ಆಗ ಇನ್ನೂ ಬಂದಿರಲಿಲ್ಲ. ಅಷ್ಟು ಸೊಗಸಾಗಿ ವಾರ್ತೆಗಳನ್ನು ಓದುತ್ತಿದ್ದರು. ಸ್ಪಷ್ಟ, ಶುದ್ಧ ಉಚ್ಚಾರಣೆ, ಅರ್ಧವಿರಾಮ, ಪೂರ್ಣ ವಿರಾಮ, ಪ್ರಶ್ನೆ, ಹೇಳಿಕೆ, ಆಶ್ಚರ್ಯಸೂಚಕ ಎಲ್ಲೆಲ್ಲಿರುತ್ತವೆಂಬ ಸ್ಪಷ್ಟ ಚಿತ್ರಣ ಕಣ್ಣ ಮುಂದೆ ಬಂದುಬಿಡುತ್ತಿತ್ತು. ಭಾಷೆಯ ಗಾಂಭೀರ್ಯ, ಜೊತೆಗೆ ಅದರಲ್ಲಿನ ಲಾಲಿತ್ಯ, ಮಾಧುರ್ಯ ಎಲ್ಲವೂ ಅನುಭವವೇದ್ಯವಾಗಿಬಿಡುತ್ತಿತ್ತು, ಮತ್ತೆ ಮತ್ತೆ ಕೇಳಬೇಕೆನಿಸುತ್ತಿತ್ತು.



ಪ್ರತಿಷ್ಠಿತ ಕಾಲೇಜೊಂದರಲ್ಲಿ ಕನ್ನಡ ಬೋಧನೆ ಮಾಡುತ್ತಿರುವ ಉಪನ್ಯಾಸಕ ರೊಬ್ಬರು ಬರೆದಿರುವ ಲೇಖನವನ್ನು ಓದುತ್ತಿದ್ದೆ. ಲೇಖನ ಪುಟ್ಟದೇ, ಹಸ್ತಪ್ರತಿಯಲ್ಲಿ ಎರಡು ಪುಟಗಳಷ್ಟೇ. ಆದರೆ, ಅಷ್ಟರಲ್ಲೇ ಐದಾರು ಕಾಗುಣಿತದ ತಪ್ಪುಗಳು ಕಂಡುಬಂದವು. ಅವರು ಬೋಧಿಸುತ್ತಿರುವ ವಿಷಯ ಕನ್ನಡವೇ ಆಗಿರುವುದರಿಂದ ಹೀಗೆ ತಾವೇ ತಪ್ಪು ಬರಹಗಳನ್ನು ಬರೆದರೆ ವಿದ್ಯಾರ್ಥಿಗಳಿಗೆ ಅವರು ಇನ್ನೇನು ಕಲಿಸಬಲ್ಲರು? ಅದೆಂತಹ ಮಾರ್ಗದರ್ಶನ ನೀಡಬಲ್ಲರು? ವಿದ್ಯಾರ್ಥಿಗಳ ತಪ್ಪುಗಳನ್ನು ಯಾವ ರೀತಿಯಲ್ಲಿ ತಿದ್ದುತ್ತಾರೆ? ಯೋಚಿಸಿದಂತೆಲ್ಲ ಸಿಟ್ಟು, ಬೇಸರ, ವಿಷಾದ, ಜಿಗುಪ್ಸೆ ಎಲ್ಲ ಭಾವನೆಗಳು ಒಟ್ಟೊಟ್ಟಿಗೆ ನುಗ್ಗಿ ಬರತೊಡಗಿದುವು. ಕನ್ನಡದವರಿಗೇಕೆ ಇಂತಹ ಧೋರಣೆ? ಭಾಷೆಯನ್ನು ಬಳಸುವಾಗ ಅದರ ಪರಿಶುದ್ಧತೆಯನ್ನೂ ಕಾಪಾಡಬೇಕೆಂಬ ಕಾಳಜಿ, ಕಲಿಸುವವರಿಗೆ ಬೇಡವೆ? ಬೇರೆ ಯಾವುದೇ ಭಾಷೆಗಿಂತ ಅತಿಹೆಚ್ಚು ಆಕ್ರಮಣ ಹಾಗೂ ಪ್ರಭಾವಗಳನ್ನು ಕನ್ನಡ ಭಾಷೆಯು ಎದುರಿಸಿಯೂ ಕೂಡ ಮೂಲಸತ್ತ್ವ, ವೈಶಿಷ್ಟ್ಯ ತನ್ನ ಮೂಲ ಸ್ಪಷ್ಟವನ್ನಾಗಲೀ, ವೈಶಿಷ್ಟ್ಯವನ್ನಾಗಲೀ ಕಳೆದುಕೊಂಡಿಲ್ಲವೆಂಬ ಅಂಶ ಎಲ್ಲರೂ ತಿಳಿಯಬೇಕಾದುದು. ಇಂತಹ ಸೊಗಸಾದ ಸತ್ವಪೂರ್ಣವಾದ ಭಾಷೆಯನ್ನು ತುಂಬ ಅಲಕ್ಷ್ಯದಿಂದ ಬಳಸುವುದು ಸರಿಯೆ? ಈ ದಿನಗಳಲ್ಲಂತೂ ನಮ್ಮ ಯುವಜನಾಂಗ ಇತರ ಭಾಷೆಗಳ, ಸಂಸ್ಕೃತಿಗಳ ವಲಯಕ್ಕೆ ಅತಿ ಸುಲಭವಾಗಿ ತೆರೆದುಕೊಳ್ಳುತ್ತಿದ್ದಾರೆ. ಹಾಗಿರುವಾಗ ನಮ್ಮ ಸಂಸ್ಕೃತಿಯ ಒಂದು ಅಭಿವ್ಯಕ್ತಿ ಸ್ವರೂಪವೆನಿಸಿರುವ ನಮ್ಮ ಭಾಷೆಯನ್ನು ಅದರ ಮಹತ್ತ್ವವನ್ನು, ಲಕ್ಷಣವನ್ನು ಸರಿಯಾಗಿ ತಿಳಿದುಕೊಳ್ಳುವುದು ಅಗತ್ಯವಿಲ್ಲವೆ? ಅದರ ಬಗ್ಗೆ ಗೌರವ, ಅಭಿಮಾನ, ಕಲಿಯುವಾಗ, ಬಳಸುವಾಗ ಶ್ರದ್ಧೆ ಇರಬೇಕಲ್ಲವೆ? ಕಲಿಸುವವರಿಗೇ ಈ ಗುಣಗಳನ್ನು ಅಳವಡಿಸಿಕೊಳ್ಳಲಾಗದಿದ್ದರೆ ಕಲಿಯುವವರಿಗೆ ಇನ್ನು ಹೇಗೆ ಕಲಿಸುತ್ತಾರೆ?

ಬೇರೆ ಭಾಷೆಯವರು ಕನ್ನಡವನ್ನು ಕಲಿತು ಬಳಸುವಾಗ ತಪ್ಪುಗಳನ್ನು ಮಾಡುವುದು ಸಹಜ, ಒಪ್ಪಿಕೊಳ್ಳೋಣ. ಆದರೆ ಕನ್ನಡಿಗರೇ ಆಗಿ ಭಾಷೆಯನ್ನು ಸರಿಯಾಗಿ ಉಳಿಸಿಕೊಳ್ಳದಿದ್ದರೆ ಅದರ ಆರೋಗ್ಯ ಸುಸ್ಥಿತಿಯಲ್ಲಿರಲು ಸಾಧ್ಯವೇ? ಪ್ರಾದೇಶಿಕ ಭಿನ್ನತೆ ಇರಲಿ, ಆದರೆ ಭಾಷಾ ಶುದ್ಧಿ, ವ್ಯಾಕರಣದ ನಿಯಮ ಅತಿಮುಖ್ಯ. ಇದನ್ನು ಮರೆಯಬಾರದು.

ಇಲ್ಲಿ, ಮತ್ತೊಂದು ಗಮನಿಸಬೇಕಾದ ಅಂಶವೆಂದರೆ ನಮ್ಮ ವಿದ್ಯುನ್ಮಾನ ಮಾಧ್ಯಮಗಳಲ್ಲಿ ವಿಚಿತ್ರವಾದ ಪ್ರಯೋಗಗಳ ಮೂಲಕ ತನ್ನ ಸೌಂದರ್ಯವನ್ನು ಕಳೆದುಕೊಳ್ಳುತ್ತಿರುವ ನಮ್ಮ ಸವಿಗನ್ನಡದ ಬಗ್ಗೆ, ಪೂರ್ಣವಿರಾಮ ಇರುವ ಕಡೆ ನಿಲ್ಲಿಸದೆ, ಎಲ್ಲಿಯೋ ತಡೆಹಾಕುತ್ತ, ನಿರರ್ಗಳವಾಗಿ ವಾಕ್ಯವನ್ನು ಉಚ್ಚರಿಸುವುದೇ ಒಂದು ಅರ್ಹತೆ ಎಂಬಂತೆ ಮಾತನಾಡುವುದು, ಕೆಟ್ಟ ಸ್ವರಾಂತ್ಯದ ಮೂಲಕ ವಾಕ್ಯವನ್ನು ನಿಲ್ಲಿಸುವುದು, ಎಲ್ಲಿಯೋ ಮಹಾಪ್ರಾಣ ಹೇಳುವುದು– ಇವೆಲ್ಲ ಆಧುನಿಕ ಉಚ್ಚಾರಣೆಯ ರೀತಿ, ಕೇಳಲು ಅಸಹನೀಯ, ವಿಷಾದಪಡಬೇಕಾದ ಸಂಗತಿ. ಬೇರೆ ಭಾಷೆಗಳ ಚಾನೆಲ್‌ಗಳಲ್ಲಿ ಬರುವ ಶುದ್ಧವಾರ್ತಾವಾಚನವನ್ನಾಗಲೀ, ನಿರೂಪಣೆಯನ್ನಾಗಲೀ ಕೇಳುತ್ತಿದ್ದರೆ ಸಂಪೂರ್ಣವಾಗಿ ಅರ್ಥವಾಗದಿದ್ದರೂ ಅದರ ಪರಿಶುದ್ಧತೆಯ ಅನುಭವವಾಗುವುದು ಸತ್ಯ. ಆದರೆ ನಮ್ಮ ಕನ್ನಡ ಭಾಷೆಯ ವಿಷಯದಲ್ಲಿ ಹಾಗಾಗುತ್ತಿಲ್ಲ. ಭಾಷೆಯ ಮೂಲ ಸೌಂದರ್ಯವನ್ನೇ ವಿಕೃತಗೊಳಿಸಲಾಗುತ್ತಿದೆ. ಬೆಂಗಳೂರು ಆಕಾಶವಾಣಿಯಿಂದ ಶ್ರವಣಬೆಳಗೊಳದ ಗೊಮ್ಮಟೇಶ್ವರನ ಮಹಾಮಸ್ತಕಾಭಿಷೇಕ ಸಮಾರಂಭದಲ್ಲಿ ಜಿ.ಪಿ.ರಾಜರತ್ನಂರವರ ಕಂಚಿನ ಕಂಠದಲ್ಲಿ ಅಚ್ಚಕನ್ನಡದ ನಿರೂಪಣೆ ಕೇಳುತ್ತಿದ್ದರೆ ಮೈಯೆಲ್ಲ ರೋಮಾಂಚನವಾಗುತ್ತಿತ್ತು. ಅದೇ ರೀತಿ ಕೃಷ್ಣಕಾಂತ್ ಅವರ ದಸರಾ ಮೆರವಣಿಗೆ ನಿರೂಪಣೆ ದೃಶ್ಯವನ್ನೇ ಕಣ್ಣೆದುರಿಗೆ ತಂದು ನಿಲ್ಲಿಸುತ್ತಿತ್ತು. ರಸವತ್ತಾದ ಶೈಲಿಯಲ್ಲಿ ಶುದ್ಧಕನ್ನಡದಲ್ಲಿ ಮೂಡಿ ಬರುತ್ತಿತ್ತು. ಆದರೆ ಈಗ? ಆಕಾಶವಾಣಿ ದೂರದರ್ಶನಕ್ಕಿಂತ ಮೇಲು.

ಈ ರಾಜ್ಯೋತ್ಸವದ ಶುಭಸಂದರ್ಭದಲ್ಲಿ ಕನ್ನಡಿಗರಾಗಿ ನಾವೀಗ ಹೋರಾಟ ಮಾಡಬೇಕಿರುವುದು ಏಕೀಕರಣಕ್ಕಾಗಿ ಅಲ್ಲ. ಕನ್ನಡ ಭಾಷೆಯ ಶುದ್ಧಿಯನ್ನು ಉಳಿಸುವುದಕ್ಕಾಗಿ ಶುದ್ಧವಾದ ಮಾತು, ಶುದ್ಧವಾದ ಬರಹ ಹಾಗೂ ಓದುವಿಕೆ – ಇವಿಷ್ಟನ್ನು ಉಳಿಸೋಣವೆಂದು ಸಂಕಲ್ಪ ಮಾಡಬಹುದಲ್ಲವೇ? ಮನೆಯಲ್ಲಿ ಕೂಡ ಮಕ್ಕಳೊಂದಿಗೆ, ಹೊರಗೆ ಹೋದಾಗ ಪರಿಚಿತರು, ಗೆಳೆಯರು, ಬಂಧುಗಳೊಂದಿಗೆ ಕನ್ನಡದಲ್ಲೇ ಮಾತನಾಡೋಣ. ಭಾಷೆ ಜೀವಂತಿಕೆಯಿಂದ ಇರಬೇಕಾದರೆ ವ್ಯವಹಾರದಲ್ಲಿ ಸರಿಯಾಗಿ ಬಳಕೆಗೊಳ್ಳಬೇಕು, ಆ ಕೆಲಸವನ್ನು ಮಾಡೋಣ. ಅನವಶ್ಯಕವಾಗಿ ಆಂಗ್ಲ ಭಾಷೆಯ ಅಥವ ಯಾವುದೇ ಭಾಷೆಯ ಕಲಬೆರಕೆ ಬೇಡವೆನ್ನೋಣ.

**"ಸಿರಿಗನ್ನಡಂಗೆಲ್ಗೆ"** •



# ದೀಪಾವಳಿ ವೈವಿಧ್ಯ

ಎಲ್ಲಾ ಹಬ್ಬಗಳು ಕತ್ತಲೆಯಿಂದ ಬೆಳಕಿನ ಕಡೆ ಕರೆದುಕೊಂಡು ಹೋಗುವ ಜ್ಞಾನಜ್ಯೋತಿಯನ್ನು ಬೆಳಗಿಸುವುದಾಗಿದೆ. ದೀಪಾವಳಿ ಆಶ್ವಯುಜ ಕೃಷ್ಣಪಕ್ಷದ ಕೊನೆಗೆ ಬಂದು ಕಾರ್ತಿಕ ಮಾಸದ ಪಾಡ್ಯ, ಬಿದಿಗೆಯಲ್ಲಿ ಕೊನೆಗೊಳ್ಳುತ್ತದೆ.

ಹಳೇ ಮೈಸೂರು ಭಾಗದಲ್ಲಿ ದೀಪಾವಳಿ ಆಚರಣೆ ಸ್ವಲ್ಪ ಭಿನ್ನವಾಗಿರುವುದನ್ನು ಗಮನಿಸಬಹುದು.

**ದೀಪಾವಳಿ:** ಅವಳಿ ಎಂದರೆ ಸಾಲು ಎಂಬರ್ಥ ಕೊಡುತ್ತದೆ. ದೀಪಗಳ ಸಾಲು ಮಠ, ಮಂದಿರ, ಮನೆಗಳಲ್ಲಿ ಗೋಚರವಾಗುತ್ತದೆ. ಕತ್ತಲಿನ ದಿನಗಳಲ್ಲಿ ದಾರಿಹೋಕರಿಗೆ ದಾರಿ ಕಾಣಿಸುವಂತೆ ಮಾಡಲು ಹಿಂದಿನ ಕಾಲದಲ್ಲಿ ದೀಪಗಳನ್ನು ರಾತ್ರಿ ಎಲ್ಲಾ ಉರಿಯುವಂತೆ ನೋಡಿಕೊಳ್ಳುತ್ತಿದ್ದರು.

ಆಶ್ವಯುಜ ತ್ರಯೋದಶಿಯಂದು 'ನೀರು ತುಂಬುವ ಹಬ್ಬ' ಎಂದು ಕರೆದು ಮನೆಯನ್ನು ಸ್ವಚ್ಛಗೊಳಿಸಿಕೊಂಡು ರಾತ್ರಿ ನೀರು ತುಂಬಿ ಆ ಪಾತ್ರೆಗಳಿಗೆ ಪೂಜಾ ದ್ರವ್ಯದಿಂದ ಅಲಂಕರಿಸಿ ಬೆಳಿಗ್ಗೆ ಆ ನೀರಿನಿಂದ ಎಣ್ಣೆ ಸ್ನಾನ ಮಾಡಿಕೊಂಡು ಚತುರ್ದಶಿ ದಿನ ಬಿರುಸು, ಬಾಣಗಳನ್ನು, ಪಟಾಕಿಯನ್ನು ಹಾರಿಸಿ, ಸಿಡಿಸಿ ಸಂಭ್ರಮಿಸುತ್ತಿದ್ದರು.

ನರಕಾಸುರನನ್ನು ಶ್ರೀ ವಿಷ್ಣುವು ಸಂಹಾರ ಮಾಡಿ ಜನರ ಸಂಕಷ್ಟಗಳನ್ನು ದೂರಗೊಳಿಸಿ ನೆಮ್ಮದಿಯಿಂದ ಬದುಕುವಂತೆ ಮಾಡಿದನೆಂದು ಪ್ರತೀತಿ.

ಕತ್ತಲೆ ಅಸುರರಿಗೆ ಪ್ರಿಯವಾದುದು. ಹಾಗೆಯೇ ಮಳೆಗಾಲ ಕಳೆದು ಚಳಿಗಾಲಕ್ಕೆ ಕಾಲಿಡುವ ಮುನ್ನ ಅನೇಕ ವಿಷಜಂತುಗಳು, ವಿಶೇಷವಾಗಿ ಇತ್ತೀಚಿನ ದಿನಗಳಲ್ಲಿ ಹೇಳಲ್ಪಡುವ ವೈರಸ್‌ಗಳು ಬಹುವೇಗವಾಗಿ ಬೆಳೆದು ಸಾವಿರಾರು ಜನರಿಗೆ ನರಕ ಸದೃಶಸ್ಥಿತಿ ಉಂಟು ಮಾಡುತ್ತದೆ. ಇಂತಹ ದಿನಗಳಲ್ಲಿ ಆಧ್ಯಾತ್ಮಿಕ ಹಿನ್ನೆಲೆಯನ್ನು ಕೊಟ್ಟು ವೈಜ್ಞಾನಿಕ ವಿಚಾರಗಳನ್ನು ತಿಳಿಸಿರುವ ನಮ್ಮ ಹಿರಿಯರಿಗೆ ಅದೆಷ್ಟು ಜ್ಞಾನವಿತ್ತೆಂಬುದು ಅರ್ಥವಾಗುತ್ತದೆ. ಈ ಸಂದರ್ಭದಲ್ಲಿ ಗಂಧಕಯುಕ್ತ ಪಟಾಕಿ ಸಿಡಿಸಿದಾಗ ಬರುವ ಹೊಗೆ ಅನೇಕ ವೈರಸ್ಸುಗಳನ್ನು ನಾಶ ಮಾಡುತ್ತದೆ. ಹಾಗೆಯೇ ಶಬ್ದದಿಂದ ಸಹ ಅನೇಕ ಕ್ರಿಮಿಗಳು ನಾಶವಾಗುತ್ತವೆ.

ಇಂದು ನಮ್ಮ ವಿಜ್ಞಾನಿಗಳು ತಾವೇ ಬೃಹಸ್ಪತಿಗಳೆಂದು ಕರೆದುಕೊಂಡು ವಾಯುಮಾಲಿನ್ಯ, ಶಬ್ದಮಾಲಿನ್ಯವಾಗುವುದೆಂದು ಸರ್ಕಾರಗಳಿಗೆ ಮಾಹಿತಿ ನೀಡಿ ಬಾಣ, ಬಿರುಸು ತಯಾರಿಕೆಗಳನ್ನು ನಿಲ್ಲಿಸುವಂತೆ ಮಾಧ್ಯಮಗಳ ಮುಖಾಂತರ ತಿಳಿಸುತ್ತಿರುತ್ತಾರೆ. ಎಷ್ಟು ಜನ ಈ ಮದ್ದಿನ ವಾಸನೆ, ಶಬ್ದದಿಂದ ಸತ್ತಿದ್ದಾರೆಂಬ ಬಗ್ಗೆ ಇನ್ನೂ ಮಾಹಿತಿ ಇಲ್ಲ.

ಇದೇ ಸಂದರ್ಭದಲ್ಲಿ ಲಕ್ಷ ದೀಪೋತ್ಸವಗಳು ಆಚರಣೆಗೆ ಬಂದು ಸಾವಿರಾರು ಹೆಣ್ಣುಮಕ್ಕಳು ಒಟ್ಟಾಗಿ ಸೇರಲು ಅನುವು ಮಾಡಿಕೊಟ್ಟಿದೆ.

ಪಾಡ್ಯದ ದಿನ ವಾಮನಾವತಾರ ತಾಳಿದ ವಿಷ್ಣುವು ಬಲಿ ಚಕ್ರವರ್ತಿಯಿಂದ ದಾನ ಪಡೆದು ತ್ರಿಲೋಕದಲ್ಲಿ ತನ್ನ ಪಾದವನ್ನಿಟ್ಟು ಅಹಂಕಾರವನ್ನು ನಾಶಮಾಡಿದನೆಂದು ಪ್ರತೀತಿ ಇದೆ. ಕತ್ತಲೆಯಿಂದ ದೂರ ಹೋಗುವುದು ಎಂದರೆ ಅಹಂಕಾರದಿಂದ ಮುಕ್ತರಾಗುವುದೆಂದರ್ಥ. ಇದನ್ನೇ ಬಲಿಪಾಡ್ಯಮಿ ಎಂದು ಆಚರಿಸುತ್ತೇವೆ. ಅಂದು ಮನೆಯಲ್ಲಿ ಸಾಕಿರುವ ದನಕರುಗಳನ್ನು ತೊಳೆದು ಅರಿಶಿನದ ನೀರಿನಿಂದ ಸ್ನಾನಮಾಡಿಸಿ, ಅಲಂಕಾರ ಮಾಡಿ ಪೂಜೆ ಸಲ್ಲಿಸಿ ಮೃಷ್ಟಾನವನ್ನು (ಹಣ್ಣು–ತರಕಾರಿಗಳನ್ನು) ತಿನ್ನಿಸಿ ರಸ್ತೆಯಲ್ಲಿ ಒಣಹುಲ್ಲನ್ನು ಹಾಸಿ ಬೆಂಕಿ ಹಚ್ಚಿ ಅದರ ಮೇಲೆ ಓಡಿಸುವುದನ್ನು 'ಕಿಚ್ಚು' ಎಂದು ಕರೆಯುತ್ತೇವೆ. ಹೀಗೆ ಮಾಡುವುದರಿಂದ ದನ ಕರುಗಳಿಗೆ ಬರುವ ಕಾಲುಬಾಯಿ ಜ್ವರ, ಇಂದಿನ ವಿಜ್ಞಾನಕ್ಕೆ ತಿಳಿಯದ ಅನೇಕ ರೋಗಗಳಿಂದ ಮುಕ್ತವಾಗುತ್ತವೆ. ಉಗಣಿ ಹಂಬನ್ನು ಅದರ ಕುತ್ತಿಗೆಗೆ ಸುತ್ತುತ್ತಾರೆ.

ದೀಪಾವಳಿಯ ಹಿಂದಿನ ದಿನ ಅಮಾವಾಸ್ಯೆಯಲ್ಲಿ ವ್ಯಾಪಾರಸ್ಥರು ತಮ್ಮ ಲೆಕ್ಕವನ್ನು ಪೂರ್ಣಗೊಳಿಸಿಕೊಂಡು ಪಾಡ್ಯದಿಂದ ಹೊಸ ಲೆಕ್ಕ ಪ್ರಾರಂಭಿಸುತ್ತಾರೆ. ಅಮಾವಾಸ್ಯೆಯ ರಾತ್ರಿ ಹಳೆಯ ಪುಸ್ತಕಗಳನ್ನು ಮತ್ತು ಹೊಸ ಪುಸ್ತಕಗಳನ್ನು ದೇವರ ಮುಂದಿಟ್ಟು 'ಲಕ್ಷ್ಮೀಪೂಜೆ' ಮಾಡಿ ಬಂಧು – ಮಿತ್ರರಿಗೆ ಸಿಹಿ ಹಂಚುತ್ತಾರೆ.

ಪಾಡ್ಯದ ನಂತರ ಬರುವ ಬಿದಿಗೆಯಂದು ಸಹೋದರಿಯರು ಸೋದರರ ಮನೆಯಲ್ಲಿ ತಂಗಿದ್ದು ಮೃಷ್ಟಾನ್ನ ಭೋಜನ ಸ್ವೀಕರಿಸಿ ತೆರಳುತ್ತಾರೆ. ಹೀಗೆ ಸಂಬಂಧಗಳನ್ನು ಬೆಳೆಸುವ ಮತ್ತು ಈ ಕಾರಣದಿಂದ ವರ್ಷಕ್ಕೊಮ್ಮೆಯಾದರೂ ದೂರ ದೂರದಿಂದ ಬಂದು ಸಂಬಂಧಗಳನ್ನು ಗಟ್ಟಿ ಮಾಡಿಕೊಳ್ಳುತ್ತಿದ್ದರು.

ಬಲೀಂದ್ರನಿಗೆ ಸ್ವಾಗತ ಕೋರಲು ಪಾಡ್ಯದ ದಿನ ಚಿನ್ನದ ಬಣ್ಣದ ಹೂವನ್ನು (ಹೊನ್ನಾವರಿಕೆ) ತಂದು ಸಗಣಿಯಲ್ಲಿ ಬಲಿಚಕ್ರವರ್ತಿಯನ್ನು ಮಾಡಿ ಅದರ ಮೇಲೆ ಚೆಂಡು ಹೂವನ್ನು ಇಟ್ಟು ಮನೆ ಬಾಗಿಲಿನಲ್ಲಿಡುತ್ತಾರೆ. ಮಕ್ಕಳೆಲ್ಲಾ ಸೇರಿ ಹೊನ್ನು ಹೊನ್ನು ಎಂದು ಕೂಗುತ್ತಾರೆ.

ಪರಮಾತ್ಮ ದೀಪದಿಂದ (ಹೊರಗಿನ) ಆತ್ಮದೀಪವನ್ನು (ಒಳಗಿನ) ಬೆಳಗಿಸಿಕೊಳ್ಳುವುದೇ ದೀಪಾವಳಿ.

ದೀಪಾವಳಿಯ ದಿನದಂದು ಕಿಚ್ಚು ಹಾಯಿಸಿದಾಗ ದನಕರುಗಳನ್ನು ಬೆಂಕಿಕೊಟ್ಟು ಹುಲ್ಲಿನ ಮೇಲೆ ಓಡಿಸುವಾಗ ಅವುಗಳ ಕಾಲಿಗೆ ಬೆಂಕಿ ತಾಗುವುದಿಲ್ಲವೇ? ಎಂಬ ಸಂಶಯ ಬರುತ್ತದೆ. ಕೊಂಡ ಹಾಯುವ ಭಕ್ತರಿಗೂ ಕೆಂಡದ ಪರಿಣಾಮವಾಗುವುದಿಲ್ಲ. ಏಕೆಂದರೆ ಕೆಂಡದ ಮೇಲಿನ ಬೂದಿ ದಾಟುವಷ್ಟರಲ್ಲಿ ಇನ್ನೊಂದು ಕಾಲನ್ನು ಮುಂದಕ್ಕಿಟ್ಟಿರುತ್ತಾರೆ. ಕಾಲಿನ ಚರ್ಮ ದಪ್ಪವಿರುವುದರಿಂದ ಮತ್ತು ತಕ್ಷಣ ಕಾಲು ಬದಲಾಯಿಸುವುದರಿಂದ ಶಾಖ ಪಾದಕ್ಕೆ ತಾಕುವುದಿಲ್ಲ. ಹಾಗೆಯೇ ಹೆದರಿದ ದನಕರುಗಳ ದೇಹದಿಂದ ತಕ್ಷಣ ಉತ್ಪತ್ತಿಯಾಗುವ ಹಾರ್ಮೋನ್, ರಕ್ತಸಂಚಾರವನ್ನು ಹೆಚ್ಚಿಸಿ, ಮೈ ಬೆವರುವಂತೆ ಮಾಡುತ್ತದೆ. ದೇಹದ 72 ಸಾವಿರ ನಾಡಿಗಳಲ್ಲಿ ಸಂಚಯವಾಗಿರುವ ಮಲವನ್ನು ಹೊರಹಾಕಲು ಸಹಕಾರಿಯಾಗಿರುತ್ತದೆ.

ಹೀಗೆ ದೀಪಾವಳಿಗೆ ವೈವಿಧ್ಯಮಯ ಮುಖಗಳಿವೆ.

**ಕೃಪೆ : ವಿಕ್ರಮ ಪತ್ರಿಕೆ**

## ಶಿಕ್ಷಕ ಸ್ತಂಭ

# ನಾವೂ ಹೀಗಾಗಬಹುದೇ?



**ನಂ. ನಾಗಲಕ್ಷ್ಮಿ**
**ನಿವೃತ್ತ ಕನ್ನಡ ಉಪನ್ಯಾಸಕರು,**
**ಸರ್ಕಾರಿ ಪ.ಪೂ. ಕಾಲೇಜು,**
**ಬೆಂಗಳೂರು**

ಸಾಮಾನ್ಯವಾಗಿ ಭಾಷಾ ತರಗತಿಗಳಲ್ಲಿ ವಿದ್ಯಾರ್ಥಿಗಳು ಏಕಾಗ್ರತೆಯಿಂದ ಕುಳಿತಿರುವುದಿಲ್ಲ. ಅವರಿಗೆ ಅದೊಂದು ರೀತಿಯ 'ಮೈಂಡ್ ರಿಲ್ಯಾಕ್ಸೇಷನ್ ತರಗತಿ' ಎಂಬ ಭಾವನೆಯೇ ಇರುತ್ತದೆ. ವಿಜ್ಞಾನ, ಗಣಿತ ಮುಂತಾದ ವಿಷಯಗಳು ತರುವ ಬೌದ್ಧಿಕ ಒತ್ತಡದಿಂದ ಬಳಲಿದ್ದಾಗ ಮನಸ್ಸಿಗೆ ಬುದ್ಧಿ ಭಾವಗಳ ವಿದ್ಯುದಾಲಿಂಗನವೆಂದು (ಹಿರಿಯ ಸಂಸ್ಕೃತ ಕವಿಯ ಉವಾಚ) ಭಾಷಾ ತರಗತಿಯಲ್ಲಿ, ಸಹಜವಾಗಿಯೇ ವಿದ್ಯಾರ್ಥಿಗಳು ಸ್ವಲ್ಪಮಟ್ಟಿಗೆ ಶಿಸ್ತನ್ನೂ ಮರೆತು ಹಗುರವಾದ ಭಾವದೊಂದಿಗೆ ಕುಳಿತಿರುತ್ತಾರೆ. ಅಂತಹುದೇ ಒಂದು ಪ್ರಸಂಗ;

ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕನ್ನಡ ಅಧ್ಯಾಪಕರಾಗಿ ಹೋಗಿ ಮೊದಲನೆಯ ದಿನವೇ ಶಿಷ್ಯರಿಗೆಲ್ಲ ಅಚ್ಚುಮೆಚ್ಚಿನವರಾದ ಅಪರೂಪದ ಗುರುಗಳು ಡಾ॥ಎ.ಆರ್.ಕೃಷ್ಣಶಾಸ್ತ್ರಿಗಳು. ಕನ್ನಡದ ಪಾಠ ನಡೆಯುವಾಗ ಮೌನವಾಗಿರದೆ ಕೆಲವರು ಮಾತನಾಡುತ್ತ ಗಲಾಟೆ ಮಾಡುತ್ತಿದ್ದರು. ಅದು ಅಲ್ಲಿ ಅದುವರೆಗೆ ನಡೆದುಬಂದಿದ್ದ ಪದ್ಧತಿ. ಆಗ ಗುರುಗಳು ಶಾಂತರಾಗಿಯೇ ಇದ್ದು "ಹೀಗೆ ಮಾಡಿದರೆ ಪರಿಣಾಮದಲ್ಲಿ ನಿಮಗೇ ನಷ್ಟ. ಸದ್ಯದಲ್ಲಿ ಪಾಠವನ್ನು ಕೇಳಲು ಬಯಸುವ ನಿಮ್ಮ ಸಹಪಾಠಿಗಳಿಗೆ ಅಡ್ಡಿ, ನನಗೆ ವೃಥಾ ಕಂಠಶೋಷಣೆ, ಹೀಗೆ ಮಾಡಬೇಡಿ. ಸೆಂಟ್ರಲ್ ಕಾಲೇಜಿನ ದೊಡ್ಡ ಹೆಸರಿಗೆ ಕಳಂಕವನ್ನು ತರಬೇಡಿ. ನಮ್ಮೆಲ್ಲರಿಗಿಂತ ನಮ್ಮ ಕಾಲೇಜು ದೊಡ್ಡದು" ಎಂದರು. ಆ ಮಾತುಗಳಿಂದ ಮೇಲಾಗಿ ಅವರು ಆ ಮಾತುಗಳನ್ನಾಡಿದ ರೀತಿಯಿಂದ ಒಟ್ಟು ತರಗತಿಯೇ ನಿಶ್ಶಬ್ದವಾಗಿತ್ತು. ಪಾಠಹೇಳಿದ ವೈಖರಿಯಿಂದ ಶಿಷ್ಯರೆಲ್ಲರ ಹೃದಯಗಳನ್ನೇ ತಮ್ಮ ಕಡೆಗೆ ಸೆಳೆದು ಅವರಿಗೆ ಅಚ್ಚುಮೆಚ್ಚಿನವರಾದರು. 'ಎಲ್ಲರಿಗಿಂತ ವಿದ್ಯಾಸಂಸ್ಥೆ ದೊಡ್ಡದು' ಎಂದು ಹೇಳಿದ್ದ ಮಾತು ವಿದ್ಯಾರ್ಥಿಗಳ ಮನತಟ್ಟಿತ್ತು. ಈ ಭಾವನೆಯನ್ನು ವಿದ್ಯಾರ್ಥಿಗಳಿಗೆ ಮೂಡಿಸುವುದು ಬಹು ಮುಖ್ಯವಾದ ಅಂಶವೆಂಬುದನ್ನು ಆ ಗುರುಗಳು ತಿಳಿದುಕೊಂಡಿದ್ದರು. ಕ್ರಮೇಣ, ಅವರ ವಿದ್ವತ್ತು ಅವರ ಬೋಧನಾ ಸಾಮರ್ಥ್ಯವೂ, ವಿದ್ಯಾರ್ಥಿಗಳ ಬಗೆಗೆ ಅವರಿಗಿದ್ದ ವಾತ್ಸಲ್ಯವೂ ವ್ಯಕ್ತವಾದಂತೆಲ್ಲ ಅವರಲ್ಲಿ ಶಿಷ್ಯರ ಪ್ರೀತಿ, ಭಕ್ತಿಗಳು ಕ್ರಮಕ್ರಮವಾಗಿ ವೃದ್ಧಿಹೊಂದಿದವು. ಕನ್ನಡದ ಅಧ್ಯಾಪಕರು ಕಪ್ಪುಹಲಗೆಯ ಮೇಲೆ ಪಠ್ಯ ಪುಸ್ತಕಗಳಲ್ಲಿಯ ಪಾತ್ರಗಳ ಗುಣದೋಷಗಳು, ಪಾತ್ರಗಳ ಪರಸ್ಪರ ಸಾದೃಶ್ಯ ವೈದೃಶ್ಯಗಳು ಮುಂತಾದ ಸಾದಾ ವಿಚಾರಗಳನ್ನು (ಸಾಮಾನ್ಯವಾಗಿ ಭಾಷಾತರಗತಿಗಳಲ್ಲಿ ಅದರಲ್ಲಿಯೂ ಕನ್ನಡ ಭಾಷೆಗೆ ಸಂಬಂಧಿಸಿದಂತೆ ಅಧ್ಯಾಪಕರು ಕಪ್ಪುಹಲಗೆಯನ್ನು ಬಳಸುವುದು ವಿರಳಾತಿವಿರಳವೆನ್ನಬಹುದು, ಅದೂ ಈ ದಿನಗಳಲ್ಲಿ.) ಬರೆದು ಬೋಧಿಸುವ ಪರಿಪಾಠವನ್ನು, ಸೆಂಟ್ರಲ್ ಕಾಲೇಜಿನಲ್ಲಿ ಅವರೇ ಮೊಟ್ಟಮೊದಲು ಪ್ರಾರಂಭಿಸಿ ತಮ್ಮ ಶಿಷ್ಯರನ್ನು ಅಚ್ಚರಿಗೊಳಿಸಿದ್ದರು. ಪಠ್ಯಪುಸ್ತಕಗಳನ್ನು ಹೃದಯಂಗಮವಾಗಿ ಬೋಧಿಸುವಷ್ಟರಿಂದ ಮಾತ್ರವೇ ಅವರಿಗೆ ತೃಪ್ತಿಯಾಗುತ್ತಿರಲಿಲ್ಲ, ಸಂದರ್ಭಾನುಸಾರವಾಗಿ, ಅವುಗಳ ವಿಚಾರದ ಜೊತೆಗೆ ಶ್ರೇಷ್ಠಗ್ರಂಥಗಳ ವಿಚಾರವನ್ನೆತ್ತಿ ತುಲನಾತ್ಮಕವಾಗಿ ಶಿಷ್ಯರ ಮನಮುಟ್ಟುವಂತೆ ವಿಮರ್ಶಿಸಿ ಪಾಠ ಹೇಳುತ್ತಿದ್ದರು. ಪಾಠ ನಡೆಯುತ್ತಿದ್ದ ಪ್ರತಿಸಲದ ಅವಧಿಯ ಅರುವತ್ತು ನಿಮಿಷಗಳೂ ಅರುವತ್ತು ಕ್ಷಣಗಳಂತೆ ತೋರುತ್ತಿದ್ದವು.



ಶಿಷ್ಯರು ಅವರ ಕೊಠಡಿಗೆ ಹೋದಾಗ ತಾವು ಅಧ್ಯಾಪಕರೆಂಬುದನ್ನೇ ಮರೆತು ಹಿರಿಯ ಮಿತ್ರರಂತೆ ಪ್ರೀತಿ ವಿಶ್ವಾಸಗಳಿಂದ ಮಾತನಾಡುತ್ತಿದ್ದರು. ಅವರಿಗೆ ಶಿಷ್ಯರಲ್ಲಿದ್ದ ವಾತ್ಸಲ್ಯದ ಪರಿಣಾಮವಾಗಿ ಅವರ ಅಕ್ಕರೆಯ ಮಾತುಗಳನ್ನು ಎಷ್ಟು ಹೊತ್ತು ಕೇಳಿದರೂ ಯಾರಿಗೂ ತೃಪ್ತಿಯೇ ಆಗುತ್ತಿರಲಿಲ್ಲ. ಅವರ ಕೊಠಡಿಗೆ ಶಿಷ್ಯರು ಹೋದಾಗ ಅವರು ಪಾಠಪ್ರವಚನಗಳ ಸಂಬಂಧವಾದ ವಿಚಾರ ಗಳನ್ನೇ ಪ್ರಸ್ತಾಪಿಸುತ್ತಿರಲಿಲ್ಲ. ಬದಲಿಗೆ, ವಿದ್ಯಾರ್ಥಿಗಳ ಹಿತಸಾಧನೆಗೆ ಅವಶ್ಯವೆಂದು ಅವರು ಭಾವಿಸಿದ್ದ ಇತರ ಶ್ರೇಷ್ಠ ವಿಚಾರ ಚರ್ಚಾರೂಪದ 'ಸುಖಸಂಕಥಾಪ್ರಸಂಗ' ವಾಗಿರುತ್ತಿತ್ತು. ಜೊತೆಗೆ, ಜೀವನದಲ್ಲಿ ಸತ್ಯ, ನೀತಿ, ಧರ್ಮ, ಸಂಪ್ರದಾಯ, ಸುಧಾರಣೆ, ದೈವಭಕ್ತಿ, ದೇಶಾಭಿಮಾನ, ಭಾಷಾಭಿಮಾನ ಮುಂತಾದವುಗಳ ಅವಶ್ಯಕತೆಗಳೆಷ್ಟೆಂಬ ವಿಚಾರಧಾರೆ. ಪಠ್ಯಪುಸ್ತಕಗಳ ಸಂಬಂಧವಾಗಿ ಶಿಷ್ಯರಲ್ಲಿ ಯಾರಾದರೂ ಪ್ರಶ್ನೆಯನ್ನೇನಾದರೂ ಕೇಳಿದರೆ, "ಇದನ್ನು ಕ್ಲಾಸಿನಲ್ಲಿ ಕೇಳಿ, ಇದಕ್ಕೇ ಅಥವಾ ನಿಮ್ಮ ಇತರ ಪ್ರಶ್ನೆಗಳಿಗೆ ಎಷ್ಟು ಬೇಕಾದರೂ ಉತ್ತರ ಹೇಳುತ್ತೇನೆ. ನಿಮಗೆ ಮಾತ್ರ ಇಲ್ಲಿ ಉತ್ತರ ಹೇಳಿದರೆ, ಇತರ ವಿದ್ಯಾರ್ಥಿಗಳಿಗೆಲ್ಲ ನಾನು ಪಕ್ಷಪಾತ ಮಾಡುವವನೆಂದೂ, ನನ್ನ ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಮಾತ್ರ ಗೋಪ್ಯವಾಗಿ ವಿಶೇಷ ರೀತಿಯಲ್ಲಿ ನಾನು ಪಾಠ ಹೇಳುವೆನೆಂದೂ, ತಪ್ಪು ತಿಳುವಳಿಕೆ ಉಂಟಾಗಬಹುದು. ಅದಕ್ಕೆ ಅವಕಾಶ ಕೊಡಬಾರದು" ಎಂದು ಉತ್ತರಿಸುತ್ತಿದ್ದರು. ಅವರ ಶಿಸ್ತಿಗೂ, ನ್ಯಾಯಪರತೆಗೂ ಇದೊಂದು ನಿದರ್ಶನ.

ಮಾತಿನಲ್ಲಾಗಲೀ, ಬರಹದಲ್ಲಾಗಲೀ ಪದಪ್ರಯೋಗ ಮಾಡುವುದರಲ್ಲಿ ಬಹಳ ಎಚ್ಚರಿಕೆಯಿಂದಿರಬೇಕೆಂಬುದು ಅವರು ಹೇಳುತ್ತಿದ್ದ ಮಾತು. ಏಕೆಂದರೆ, ಕನ್ನಡ ಭಾಷೆಯನ್ನು ಬಳಸುವಾಗಲಂತೂ ಅನೇಕರು ತುಂಬ ಧೋರಣೆಯಿಂದ ಪದಗಳನ್ನು ಪ್ರಯೋಗಿಸುವುದು

ಪುಟ 10 ಕ್ಕೆ ➤

# ಪಾಲಕರು, ಶಿಕ್ಷಕರು ಮತ್ತು ಸರ್ಕಾರಗಳ ಕರ್ತವ್ಯ

ಮಾನವನ ಜೀವನಕ್ಕೆ ಅರ್ಥ ಬರಲು, ಸಾರ್ಥಕ್ಯ ದೊರಕಲು ವಿದ್ಯೆ ಅದೆಷ್ಟು ಅನಿವಾರ್ಯ ಎಂಬುದನ್ನು ಭಾರತೀಯ ಸನಾತನ ಪರಂಪರೆ ಮನೋಜ್ಞವಾಗಿ ವಿವರಿಸುವಲ್ಲಿ ಎಂದೂ ಎಚ್ಚರ ತಪ್ಪಿಲ್ಲ. ಗುರುತತ್ತ್ವವನ್ನು ಅವತಾರಪುರುಷರೂ ಗೌರವಿಸಿ ಅದಕ್ಕೆ ವಿಧೇಯರಾಗಿ ನಡೆದುಕೊಂಡ ಸನ್ನಡತೆಗಳೇ ನಮ್ಮ ಸಂಸ್ಕೃತಿಯ ಹಿರಿಮೆ-ಗರಿಮೆ ಮತ್ತು ಅದುವೇ ನಾಗರಿಕತೆಯ ಜೀವಂತ ಮುಂದುವರಿಕೆಗೆ ದ್ಯೋತಕವಾದದ್ದು.

ನ ಹಿ ಜ್ಞಾನೇನ ಸದೃಶಂ, ವಿದ್ಯಾ ವಿಹೀನಃ ಪಶುಃ ವಿದ್ಯಾ ಗುರೂಣಾಂ ಗುರುಃ, ಸಾ ವಿದ್ಯಾ ಯಾ ವಿಮುಕ್ತಯೇತ್...' ಇವೇ ಮೊದಲಾದ ಆರ್ಷ ನುಡಿಗಳು ನಮ್ಮ ಪರಂಪರೆಯನ್ನು ದಿಟ್ಟತನದಿಂದ ಮುನ್ನಡೆಸಿದೆಯಲ್ಲದೇ ಆದರ್ಶಪೂರ್ಣ ಸಾರ್ಥಕ್ಯವನ್ನು ದೊರಕಿಸಿ ಕೊಟ್ಟಿವೆ. 'ಅನ್ನೇನ ಕ್ಷಣಿಕಾ ತೃಪ್ತಿಃ ಯಾವತ್ ಜೀವಂ ಚ ವಿದ್ಯಾಯಾ' ಅಂದರೆ ಅನ್ನವು ಒಂದು ಹೊತ್ತಿನ ಹಸಿವನ್ನು ಹೋಗಲಾಡಿಸಿದರೆ ವಿದ್ಯೆ ಇಡೀ ಜೀವನದ ಹಸಿವನ್ನೇ ಹೋಗಲಾಡಿಸುತ್ತದೆ ಎಂಬ ಸುಭಾಷಿತಕಾರರ ದಿಟ್ಟ ನುಡಿಯಲ್ಲಿ ಶಿಕ್ಷಣಮೌಲ್ಯ ದರ್ಶನ, ಗಟ್ಟಿತನ ಕಾಣದೇನು? ಭರ್ತೃ ಹರಿಯ ವೈರಾಗ್ಯಶತಕದಲ್ಲಿ ಸಮಸ್ತ ದುಃಖಗಳನ್ನು ನಾಶ ಮಾಡುವ ಸಾಮರ್ಥ್ಯ ಜ್ಞಾನಕ್ಕೆ ಮಾತ್ರವೇ ಇರುವುದರಿಂದ ಜ್ಞಾನ ಮಾರ್ಗವನ್ನು ಅನುಸರಿಸಿ ಎಂದಿದ್ದಾರೆ.

ವ್ಯಕ್ತಿಗಳಿಂದ ಕುಟುಂಬ, ಕುಟುಂಬಗಳ ಸಮೂಹವೇ ಸಮಾಜ. ವಿಸ್ತೃತ ಸಮಾಜವೇ ರಾಜ್ಯ, ರಾಷ್ಟ್ರ ಅಲ್ಲವೇ? ಅಂದರೆ ರಾಷ್ಟ್ರವೆಂದರೆ ಕೇವಲ ಭೌಗೋಳಿಕ ಪರಿಸರವಲ್ಲ, ಜನಸಂದಣಿಯ ಬೀಡು ಅಷ್ಟೇ ಅಲ್ಲ, ಎಂದಾಯಿತಲ್ಲವೆ? ಇಲ್ಲಿ ಜೀವನವನ್ನು ರೂಪಿಸಿಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಯೂ ಪಾಲಕರ ಹಾಗೂ ಶಿಕ್ಷಕರ ಕೃಪಾಪೋಷಿತನೇ ಆಗಿರುತ್ತಾನೆ. ಇವರೀರ್ವರ ಕಾರ್ಯಕ್ರಮಗಳಿಗೆ ಆದರ್ಶದ ಚೌಕಟ್ಟಿನಲ್ಲಿ ಯಶಸ್ಸು ದೊರಕಿಸಿಕೊಡುವ ಕರ್ತವ್ಯ ಸರ್ಕಾರದ್ದೇ ಆಗಿದೆ. ಆದ್ದರಿಂದಲೇ 'ರಾಜಾ ಪ್ರತ್ಯಕ್ಷ ದೇವತಾ' ಎಂಬ ನಿಷ್ಠಾಪೂರ್ಣ ಆದರ್ಶ ರಕ್ತಗತವಾಗಿದೆ. ಸಮಾಜದಲ್ಲಿ ಪಾಲಕರು, ಶಿಕ್ಷಕರು ಮತ್ತು ರಕ್ಷಣೆಯ ಜವಾಬ್ದಾರಿ ಹೊತ್ತ ಸರ್ಕಾರ ಅಪೇಕ್ಷಿತ ಕರ್ತವ್ಯಗಳನ್ನು ಬದ್ಧತೆಯಿಂದ ಯೋಗ್ಯ ರೀತಿಯಲ್ಲಿ ನಿರ್ವಹಿಸಿದ್ದೆ ಆದರೆ ಅವರಿಂದ ಅಪಾರ ಹಾಗೂ ಅಪೂರ್ವವಾದ ಸೇವೆ, ಉಪಕಾರಗಳು ದೊರೆತಂತೆ ಆಗುತ್ತದೆ.

ವಿಷ್ಣು ಪುರಾಣವು 'ಮೂರ್ಖರು ಬಾಲ್ಯವನ್ನು ಆಟದಲ್ಲಿಯೂ, ಯೌವ್ವನವನ್ನು ವಿಷಯಸುಖಗಳಲ್ಲಿಯೂ ಮತ್ತು ವೃದ್ಧಾಪ್ಯವನ್ನು ನಿಶ್ಶಕ್ತ ಜೀವನದಿಂದ ಕಳೆಯುತ್ತಾರೆ' ಎಂದಿದೆ. ಒಟ್ಟಾರೆ ಮಾನವಸಮಾಜದಲ್ಲಿ ಮಾತಾಪಿತೃಗಳ, ಶಿಕ್ಷಕರ ಮತ್ತು ಸರ್ಕಾರಗಳ ಕರ್ತವ್ಯ ನಿಷ್ಠೆಯ ಬಲದಿಂದ ವ್ಯಕ್ತಿಯ 'ಉತ್ಥಾನ' ಹಾಗೂ ಕರ್ತವ್ಯ ನಿರ್ಲಕ್ಷ್ಯದಿಂದ ವ್ಯಕ್ತಿಯ 'ಪತನ', ಎರಡೂ ಮುಖಗಳನ್ನು ಪರಾಂಬರಿಸಬಹುದಾಗಿದೆ. ಜೀವನವನ್ನು ರೂಪಿಸಿದ ವಿದ್ಯಾಭ್ಯಾಸ ಜೀವವನ್ನೇ ತೆಗೆಯುತ್ತದೆ. ವಿದ್ಯಾಭ್ಯಾಸದ ಮುಖ್ಯ ಉದ್ದೇಶ ಸಾಮಾನ್ಯ ಮನುಷ್ಯನನ್ನು ಯೋಗ್ಯ ಮನುಷ್ಯನನ್ನಾಗಿ ರೂಪಿಸುವುದಾಗಿದೆ. ಆಮೇಲೆ ಅವನು ಆಡಳಿತಗಾರನಾಗುತ್ತಾನೋ? ಆಟಗಾರನಾಗುತ್ತಾನೋ ಚಿಂತೆಯಿಲ್ಲ.

ಮಕ್ಕಳನ್ನು ಯೋಗ್ಯವನ್ನಾಗಿ ರೂಪಿಸುವ ಮಹಾವ್ಯಕ್ತಿತ್ವನಿರ್ಮಾಣದ ಯಜ್ಞದಲ್ಲಿ ಪಾಲಕರು, ಶಿಕ್ಷಕರು ಹಾಗೂ ಸರ್ಕಾರದ ಪಾತ್ರ ಗುರುತರವಾದದ್ದು ಇವರು ನಿರ್ವಹಿಸಬೇಕಾದ ಜವಾಬ್ದಾರಿ ಕುರಿತಾಗಿ ಚಿಂತನೆ ನಡೆಸೋಣ.

**ಪಾಲಕರ ಪಾತ್ರ :** ತಾಯಿ-ತಂದೆಯರು ಮಕ್ಕಳ ಪಾಲಿಗೆ ಜೈವಿಕ ಮಾತಾ ಪಿತೃಗಳಾದರಷ್ಟೇ ಸಾಲದು. ಮಕ್ಕಳನ್ನು ಲಾಲಿಸಿ, ಪೋಷಿಸುವ ಇವರು ಮೊದಲು ತಿಳಿಯಬೇಕಾದ ಸತ್ಯವೆಂದರೆ, ತಾವು ಮಕ್ಕಳನ್ನು ಹೆತ್ತಿದ್ದೇವೆ, ಈಯಲಿಲ್ಲ! ಯಾವ ಪ್ರಾಣಿ ಪಕ್ಷಿಗಳು ತಮ್ಮ ಸಂತಾನಕ್ಕೆ ಸೋಮಾರಿತನದ ಜೀವನದೀಕ್ಷೆ ನೀಡುವುದಿಲ್ಲ. ಬಲವಂತವಾಗಿ ಯಾದರೂ ಔಷಧವನ್ನು ನೀಡಿ ರೋಗವನ್ನು ಪರಿಹರಿಸುವಂತೆ ಮಕ್ಕಳು ಇಷ್ಟಪಡದಿದ್ದರೂ ಅವರಿಗೆ ಪ್ರಯತ್ನಪೂರ್ವಕವಾಗಿ ಶಿಕ್ಷಣ ನೀಡಿ, ನ್ಯಾಯ ನೀತಿಗಳನ್ನು ಕಲಿಸಿಕೊಡಬೇಕು. ಯೌವ್ವನ ಬರುವುದರೊಳಗೆ ವಿದ್ಯಾಭ್ಯಾಸ ನೀಡಬೇಕು. ಕಾಲ ಮೀರಿದ ಮೇಲೆ ಗದ್ದೆ ಉತ್ತರೆ ಪ್ರಯೋಜನವಿಲ್ಲ. ವಿದ್ಯೆ ಕಲಿಸಲು ಪುಸ್ತಕ ಜ್ಞಾನವಷ್ಟೇ ಸಾಕು; ಶೀಲವನ್ನು ಕಲಿಸಲು ಶೀಲವಂತರೇ ಬೇಕು!

ಮಕ್ಕಳ ವ್ಯಕ್ತಿತ್ವದಲ್ಲಿ ಸಾಮರ್ಥ್ಯ-ಚಾತುರ್ಯ ಪ್ರತಿಭೆಗಳೇ ಮೊದಲಾದ ಶಕ್ತಿಗಳು ವಿಕಾಸ ಹೊಂದುತ್ತಿರುವ ಕಾಲದಲ್ಲೇ ಸಮಾನಾಂತರವಾಗಿ ಸೌಜನ್ಯ, ಔದಾರ್ಯ, ಕರುಣೆ, ಸಹನೆ, ಸಂಯಮಗಳಂತಹ ಸದ್ಗುಣಗಳೂ ವಿಕಾಸಗೊಂಡರಷ್ಟೇ ವ್ಯಕ್ತಿತ್ವಪ್ರಜ್ಞೆ ಹಾಗೂ ಚಾರಿತ್ರ್ಯಪ್ರಜ್ಞೆಗಳು ಮೂಡುತ್ತವೆ. ಇಲ್ಲದಿದ್ದರೆ ಸ್ವಾರ್ಥ, ಮತ್ಸರ, ಜಂಬ, ದರ್ಪಗಳೆಂಬ ಅನಿಷ್ಟಗಳು ಹುಲುಸಾಗಿ ಬೆಳೆದು ವ್ಯಕ್ತಿತ್ವ ಎಂಬ ಬೆಳೆಗೆ ಕಳೆಯಾಗಿ ಹಾನಿ ಉಂಟುಮಾಡುತ್ತವೆ, ಬೆಳೆ ಉತ್ತಮವಾಗಿ ಮೂಡಲು ಕಾಳಜಿವಹಿಸಬೇಕು. ಆದರೆ ಕಳೆಯು ಸ್ವತಂತ್ರವಾಗಿ ಬೆಳೆಯಬಲ್ಲದು! ಶ್ರೀರಾಮನಿಗೆ ರಾವಣನೆಂಬ ಕಳೆಯನ್ನು ನಾಶ ಮಾಡುವುದು ಎಷ್ಟು ಮುಖ್ಯವಾಗಿತ್ತೋ, ವಿಭೀಷಣನೆಂಬ ಬೆಳೆಗೆ ಹಾನಿ ಆಗದಂತೆ ಸಂರಕ್ಷಿಸಬೇಕಾದ ಹೊಣೆಗಾರಿಕೆಯೂ ಇತ್ತು! ಶಿಕ್ಷಕರ ತರಬೇತಿ ಸಂಸ್ಥೆಗಳಿರುವಂತೆ ಪಾಲಕರ ತರಬೇತಿ ಸಂಸ್ಥೆಗಳ ಅವಶ್ಯಕತೆಯೂ ಇದೆ. ನವವಿವಾಹಿತರ ತಯಾರಿಗಾಗಿ ರಾಮಕೃಷ್ಣ ಆಶ್ರಮಗಳು ಗೃಹಸ್ಥ ಜೀವನ ನಡೆಸಲು ಬೇಕಾದ ಮಾರ್ಗದರ್ಶನ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿರುವುದು ಗಮನಾರ್ಹ. ಅವರವರ ಭವಿಷ್ಯದ ಶಿಲ್ಪಿಗಳು ಅವರವರೇ ಆದರೂ ಮಕ್ಕಳ ವ್ಯಕ್ತಿತ್ವ ನಿರ್ಮಾಣ ಕಾರ್ಯದಲ್ಲಿ ತಂದೆ ತಾಯಿಗಳ ಪಾತ್ರ ಮಹತ್ವ ಪೂರ್ಣವಾದದ್ದು. ಸಜ್ಜನರು ಮಕ್ಕಳಿಗೆ ಶಿಕ್ಷಣವನ್ನೀಯುವುದು ಕರ್ತವ್ಯ ಮಕ್ಕಳು ತಮ್ಮ ಪ್ರಯತ್ನದ ಮೂಲಕ ಸದ್ಗುಣಗಳನ್ನು ಸಂಪಾದಿಸಿಕೊಳ್ಳಬೇಕು. ರೈತ ತನ್ನೆಲ್ಲಾ ಕೆಲಸಗಳನ್ನು ಶ್ರದ್ಧೆಯಿಂದ ಮಾಡಬಹುದಷ್ಟೇ ಮೊಳೆಯುವುದು ಬೀಜದ ಕೆಲಸ!

**ಶಿಕ್ಷಕರ ಹೊಣೆ** : 'ಗುರು' ಎಂಬುದು ಉದಾತ್ತತತ್ತ್ವ. ಅದೊಂದು ಸಂಸ್ಥೆ ಅಕ್ಷರಸ್ಥರನ್ನು ತಯಾರು ಮಾಡಬಹುದಾದರೂ ಅವರನ್ನು ವಿಚಾರಶೀಲರನ್ನಾಗಿ ಮಾಡದಿದ್ದರೆ ವಿದ್ಯಾಭ್ಯಾಸ ಬಹುಮಟ್ಟಿಗೆ ವ್ಯರ್ಥ. ಶಿಕ್ಷಕನು ವಿದ್ಯಾಭ್ಯಾಸದ ಯಾವುದೇ ಹಂತದ ಬೋಧಕರಾಗಿದ್ದರೂ ಅವನ ಪಾತ್ರವನ್ನು ನಿರ್ಲಕ್ಷಿಸುವಂತಿಲ್ಲ, ಏಕೆಂದರೆ ವಿದ್ಯಾರ್ಥಿಯ ವ್ಯಕ್ತಿತ್ವ, ಭವಿಷ್ಯವನ್ನು ರೂಪಿಸುವ ಕಾರ್ಯದಲ್ಲಿ ಇನ್ನಾವುದೇ ವ್ಯಕ್ತಿಗಿಂತಲೂ ಶಿಕ್ಷಕನದ್ದು ಸಿಂಹಪಾಲು! ಎಂದಿದ್ದಾರೆ ಡಾಕ್ಟರ್ ಅಬ್ದುಲ್ ಕಲಾಂ.

ಪುಟ 7 ಕ್ಕೆ ➢

➢ **ಪುಟ 6 ರಿಂದ.....**

ಶಿಕ್ಷಕನು ವಿದ್ಯಾರ್ಥಿಗಳನ್ನು ಎರಡು ದುರಂತಗಳಿಂದ ಪಾರು ಮಾಡಲೇಬೇಕು. ಮೊದಲನೆಯದೆಂದರೆ ವಿದ್ಯಾರ್ಥಿ ತನ್ನ ಶಕ್ತಿಯನ್ನು ರೂಪಿಸಿಕೊಳ್ಳಬೇಕು, ವೃದ್ಧಿಸಿಕೊಳ್ಳಬೇಕು. ತನ್ನ ಸಾಮರ್ಥ್ಯದ ಅರಿವು ಅವನಿಗಿರಬೇಕಲ್ಲದೆ ಇತರರ ಸಾಮರ್ಥ್ಯದ ಕನಿಷ್ಠ ಅರಿವಾದರೂ ಇರಬೇಕು. ಈ ಎರಡು ವಿಷಯಗಳಲ್ಲಿ ಅಜ್ಞಾನ ಹಾಗೂ ಅವಿವೇಕದಿಂದ ಕೂಡಿ ಜೀವನದಲ್ಲಿ ಗುರಿಯಿಲ್ಲದೇ ಮುನ್ನುಗ್ಗಿದರೆ ಬೆಂಕಿಗೆ ಆಹುತಿಯಾದ ಚಿಟ್ಟೆಯಂತಾಗುತ್ತದೆ ಅವನ ಬದುಕು!

ಎರಡನೆಯದೆಂದರೆ ವಿದ್ಯಾರ್ಥಿ ತನ್ನ ಕ್ರಿಯಾಸಿದ್ಧಿಯ ರಹಸ್ಯ ವ್ಯಕ್ತಿತ್ವದ ಸತ್ವದಲ್ಲಿಯೇ ಹೊರತು ಮತ್ಯಾವುದೋ ಸಲಕರಣಿ ಹಾಗೂ ದರ್ಪ ದೌರ್ಜನ್ಯದಲ್ಲಿಲ್ಲ ಎಂಬ ಸತ್ಯ ಅರಿಯಬೇಕು. ಶೌರ್ಯದಿಂದ ಕೀರ್ತಿ; ನಿಷ್ಕ್ರಿಯತೆಯಿಂದ ಕಳಂಕ! ಅಲ್ಲದೆ ದೀನರಲ್ಲಿ ದರ್ಪ ತೋರುತ್ತಾ, ಶಕ್ತರ ಮುಂದೆ ಮೆತ್ತಗಿರುತ್ತ, ಅಧಿಕಾರಿಗಳ ಮುಂದೆ ಮುದುಡಿ ಕೊಂಡಿರುವಂಥವನು ಎಷ್ಟೇ ವಿದ್ಯಾವಂತರಾಗಿದ್ದರೂ ಆತ ಒಬ್ಬ ಆತ್ಮವಿಶ್ವಾಸವುಳ್ಳ ಕೂಲಿಗಿಂತಲೂ ಕಡೆ!

ಶಿಕ್ಷಕನು ವಿದ್ಯಾರ್ಥಿಗೆ ಮಾತು, ಕೃತಿಗಳ ವೈಯಕ್ತಿಕ ಮಹತ್ವ ಹಾಗೂ ಅವೆರಡರ ನಡುವಿನ ಸಂಬಂಧಗಳ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಶಿಕ್ಷಕನು ವಿದ್ಯಾರ್ಥಿಗೆ ಉತ್ತಮ ಮಾತು ಅಮಂಗಲವನ್ನು ಹೋಗಲಾಡಿಸುತ್ತದೆ, ಶತ್ರುತ್ವವನ್ನು ನಿರ್ಮೂಲನಗೊಳಿಸುತ್ತದೆ. ಕೀರ್ತಿಯನ್ನು ದೊರಕಿಸಿಕೊಡುತ್ತದೆ, ಶಾಂತ ಸನ್ನಿವೇಶಕ್ಕೆ ಎಡೆಮಾಡಿಕೊಡುತ್ತದೆ. ಅದು ಸದಾ ಸದ್ವಿಚಾರಗಳ ತವರು ಇಷ್ಟಾರ್ಥಗಳನ್ನು ಪೂರೈಸುವ ಖನಿ ಉತ್ತಮ ಮಾತು ಕಾಮಧೇನು! ಎಂಬ ಆದರ್ಶವನ್ನು ತನ್ನ ಮಾತು ಕೃತಿಗಳಿಂದ ಮನದಟ್ಟಾಗಿರಬೇಕು.

ಕಾಯಕ ಕುರಿತಾಗಿ ಶಿಕ್ಷಕರು ಮಕ್ಕಳಲ್ಲಿ 'ಕಾಯಕಕ್ಕೆ ಸಮನಾದ ಬಂಧುವಿಲ್ಲ. ಸೋಮಾರಿತನಕ್ಕಿಂತ ದೊಡ್ಡಶತ್ರು ಮತ್ತೊಂದಿಲ್ಲ. ಕಾಯಕನಿಷ್ಠೆಗೆ ಎಂದಿಗೂ ಕೇಡೆಂಬುದಿಲ್ಲ. ಸ್ವಪ್ರಯತ್ನ ಇಲ್ಲದಿದ್ದಾಗ ಕೇವಲ ಇತರರ ಸಹಾಯ ಹಸ್ತ ಎಂಬುದು ನಮ್ಮನ್ನು ಬಹುದೂರ ಕೈ ಕೈ ಹಿಡಿದು ಕೊಂಡೊಯ್ಯುವುದು ಅಲ್ಲದೆ ಪ್ರಯತ್ನಕ್ಕೆ ಅಡ್ಡ ಬರುವ ಸಹಾಯ ಹಸ್ತವೂ ನಮ್ಮನ್ನು ಸೋಮಾರಿಗಳನ್ನಾಗಿ, ನಿಷ್ಕ್ರಿಯರನ್ನಾಗಿ ರೂಪಿಸಿ ಗುಲಾಮಗಿರಿಯ ಪಾಪಕೂಪಕ್ಕೆ ತಳ್ಳುವುದು ದಿಟ! ಪರಾವಲಂಬನೆಯನ್ನೇ ಸೌಭಾಗ್ಯವೆಂಬಂತೆ ಭಾವಿಸುವುದು ರೋಗಗ್ರಸ್ತ ಮನಸ್ಸಿನ ಸ್ವಷ್ಟಲಕ್ಷಣ. ತನ್ನನ್ನು ತಾನು ರಕ್ಷಿಸಿಕೊಳ್ಳದಿದ್ದರೆ ಬೇರಾವ ರಕ್ಷಣೆಯೂ ಸಿದ್ಧಿಸುವುದಿಲ್ಲ, ಆಸೆಬುರುಕರು ಲೋಕಕ್ಕೇ ದಾಸರು; ಆಸೆಯನ್ನು ದಾಸಿಯಾಗಿಸಿಕೊಂಡವರ ವಿಷಯದಲ್ಲಿ ಲೋಕವೇ ಅವರಿಗೆ ದಾಸಿಯಾಗುತ್ತದೆ... ಮೊದಲಾದ ವಿಚಾರಗಳ ಬಗ್ಗೆ ಸ್ಪಷ್ಟತೆ ಮೂಡಿಸಬೇಕು.

ಶ್ರೀ ಗೌಡಾಪಾದಾಚಾರ್ಯರು

**'ಉತ್ಸೇಕ ಉದಧೇರ್ಯದ್ವತ್‌ಕುಶಾಗ್ರೇನೈಕ ಬಿಂದುನಾ।**

**ಮನಸೋ ನಿಗ್ರಹಸ್ತದ್ವದ್ಭವೇದಪರಿಖೇದತಃ॥'**

ಅಂದರೆ ಸಮುದ್ರವನ್ನು ದರ್ಬೆಯ ತುದಿಯಿಂದ ಒಂದೊಂದು ಹನಿಯಾಗಿ ಖಾಲಿ ಮಾಡುವುದು ಹೇಗೋ ಹಾಗೆಯೇ ಮನೋನಿಗ್ರಹವು ತಾಳ್ಮೆಗೆಡದೆ ನಡೆಯಬೇಕು ಎಂದಿದ್ದಾರೆ

ಶ್ರೀ ಶಂಕರಾಚಾರ್ಯರು ಹೇಳುತ್ತಾರೆ: ತಂದೆ ಮಾಡಿದ ಸಾಲವನ್ನು ಅವನ ಮಕ್ಕಳು ಮುಂತಾದವರು ತೀರಿಸಬಹುದು. ಆದರೆ ತನ್ನ ಬಂಧನದಿಂದ ಬಿಡುಗಡೆ ಅವನಿಂದಲೇ ಆಗಬೇಕೇ ಹೊರತು ಅನ್ಯರಿಂದಾಗದು. ತಲೆ ಮೇಲಿನ ಭಾರವನ್ನು ಬೇರೆಯವರು ನಿವಾರಿಸಬಹುದು. ಆದರೆ ಹಸಿವಿನ ದುಃಖ ಉಣ್ಣುವುದರಿಂದ ನಿವಾರಣೆಯಾಗದು. ಪಥ್ಯ ಮತ್ತು ಔಷಧ ಸೇವನೆಯಿಂದಷ್ಟೇ ರೋಗಿಯ ಆರೋಗ್ಯ ಸುಧಾರಿಸುತ್ತದೆಯೇ ಹೊರತು, ಇತರರು ಮಾಡುವ ಕ್ರಿಯೆಗಳಿಂದ ಅಲ್ಲ ಎಂಬ ಮಾತುಗಳನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ಮನದಟ್ಟಾಗಿಸಬೇಕಲ್ಲವೇ.

ಶಿಕ್ಷಕರೇ ನೆನಪಿಡಿ ವಿಜ್ಞಾನಿಯ ಅಂತರ್ ಯುಗದಲ್ಲಿ ಸತ್ವ ಇದ್ದಿರಬಹುದು. ಸಂತನೊಬ್ಬನ ಅಂತರಂಗದಲ್ಲಿ ಸಾತ್ವಿಕ ಸಂಸ್ಕಾರಗಳಿವೆ. ಕಲಾವಿದನ ವ್ಯಕ್ತಿತ್ವದಲ್ಲಿ ಪ್ರತಿಭೆ ಹುದುಗಿರಬಹುದು, ಆದರೆ ಅವರೆಲ್ಲರ ಯಶಸ್ಸಿನ ಹಿನ್ನೆಲೆಯಲ್ಲಿ ಸಮರ್ಥ ಶಿಕ್ಷಕನೊಬ್ಬ ಇದ್ದಿರಲೇಬೇಕಲ್ಲವೇ ಎಂದಿದ್ದಾರೆ ಪೂಜ್ಯ ಸ್ವಾಮಿ ಪುರುಷೋತ್ತಮಾನಂದರು.

ಶಿಕ್ಷಕನಾದವನು ವ್ಯವಹಾರ ಚತುರನಾಗುವುದಕ್ಕಿಂತ ವಿವೇಕಿ ಕುಶಾಗ್ರಮತಿ, ಮೌಲ್ಯವಂತನಾಗಿರಬೇಕು ಅವನು ಇತಿಹಾಸಪತ್ಯ ಬೋಧಿಸುವುದಕ್ಕಷ್ಟೇ ಸೀಮಿತವಾಗಬೇಕಿಲ್ಲ. ಪ್ರಾಮಾಣಿಕ ಪ್ರಯತ್ನದಿಂದ ಇತಿಹಾಸ ನಿರ್ಮಿಸುವವನೂ ಆಗಬಹುದಾಗಿದೆ. ಶಿಕ್ಷಕನು ಜಗತ್ತಿನಲ್ಲಿ ಇನ್ಯಾವುದೇ ವಿಚಾರಗಳಿಗಿಂತ ಜ್ಞಾನದ ದೃಷ್ಟಿಯಲ್ಲಿ ಗುರುತಿಸಲ್ಪಡ ಬೇಕೆಂಬ ಸತ್ಯವು ಶಿಕ್ಷಕನ ಆತ್ಮ ಸಾಕ್ಷಿಯಾಗಬೇಕು.

**ಸರ್ಕಾರದ ಪಾತ್ರ** : ಆಡಳಿತಗಾರರು ತಮ್ಮ ಅವಧಿ ಐದು ವರ್ಷಗಳ ಗುತ್ತಿಗೆ ಎಂದು ತಿಳಿಯಬಾರದು. ಅವರುಗಳು ಸಮಾಜದಲ್ಲಿನ ಕಾನೂನು ಪಾಲಿಸದವರ, ಸರ್ಕಾರಿ ಆದೇಶ ಧಿಕ್ಕರಿಸುವ ಮತ್ತು ಮಾನವೀಯತೆಯ ಶತ್ರುಗಳಂತೆ ವ್ಯವಹರಿಸುವವರನ್ನು ಗಂಭೀರವಾಗಿ ಪರಿಗಣಿಸಲೇಬೇಕು. ಆಳುವವರೇ ಕಾನೂನಿಗೆ ಅವಿಧೇಯರಾದಾಗ ಅವರಿಗೆ ಜನರು ವಿಧೇಯರಾಗಲು ಸಾಧ್ಯವಿಲ್ಲ. ಗೊಲ್ಲನಿಲ್ಲದಿದ್ದರೆ ಗೋವುಗಳು ಚೆದುರಿ ಹೋಗುವಂತೆ ಯೋಗ್ಯ ರಾಜನಿಲ್ಲದಿದ್ದರೆ ರಕ್ಷಣೆ ಇಲ್ಲದೆ ಪ್ರಜೆಗಳು ನಾಶವಾಗುತ್ತಾರೆ! ಇಂದು ಬಹುತೇಕ ಆಡಳಿತಗಾರರು ನಿಮ್ಮ ಕೈ ಕೆಸರಾದರೆ ನಮ್ಮ ಬಾಯಿ ಮೊಸರು ಎಂಬ ಸಂದೇಶವನ್ನು ಪ್ರಜೆಗಳಿಗೆ ರವಾನಿಸುತ್ತಿದ್ದಾರೆಯೋ ಎಂಬಂತಿದೆ. ಆಡಳಿತಗಾರರು ವಿವೇಕಿಗಳ, ಪ್ರಾಜ್ಞರ ಸಕಾಲಿಕ ಸಲಹೆಗಳಿಗೆ ಓಗೊಡುತ್ತಿಲ್ಲಾ. ಅವರ ನಡೆ ನುಡಿಗಳಲ್ಲಿ ರಾಷ್ಟ್ರಭಕ್ತಿಯೆಂಬುದು ನಿರ್ಲಕ್ಷಿತವಾಗಿರುವುದು ದುರಂತವೇ ಸರಿ! ಇತರರನ್ನು ವಿನಾಕಾರಣ ವಿರೋಧಿಸುವ ಗುಣಶಾಲಿಗಳನ್ನು ದ್ವೇಷಿಸುವ, ದೇವರಿಲ್ಲ ಧರ್ಮ– ಬೇಕಿಲ್ಲ ಎಂಬ ಉಡಾಫೆಯ ಮಾತುಗಳೇ ಆಡಳಿತಗಾರರ ಬಂಡವಾಳವಾಗಿ ರಾರಾಜಿಸುತ್ತಿದೆ. ಮಾತಿನಲ್ಲಿ ಅರ್ಥ ಅಡಗಿದೆ, ಮಾತೇ ಅರ್ಥಕ್ಕೆ ಮೂಲ, ಮಾತಿನೊಂದಿಗೆ ಅರ್ಥವೂ ಬೆರೆತಿದೆ, ಮಾತನ್ನು ಸುಳ್ಳಾಗಿ ತಪ್ಪಾಗಿ ಅರ್ಥೈಸುವುದು ಎಲ್ಲ ಅಪರಾಧಗಳನ್ನು ಮಾಡಿದಂತೆ ಎಂಬ ಕಟು ಸತ್ಯವನ್ನು ಅರಿಯಲು ಅವರಿನ್ನೂ ಬಹುದೂರ ಸಾಗಬೇಕಿದೆ

ಮಾತೃದೇವೋಭವ, ಪಿತೃ ದೇವೋಭವ, ಆಚಾರ್ಯ ದೇವೋಭವ, ರಾಜಾ ಪ್ರತ್ಯಕ್ಷ ದೇವತಾ ಮೊದಲಾದ ಸನಾತನ ಆದರ್ಶಗಳು ಫಲಪ್ರದವಾಗಲು ಪಾಲಕರು, ಶಿಕ್ಷಕರು ಮತ್ತು ಸರ್ಕಾರಗಳು ಉಪಕರಿಸಬೇಕು. ಆಗ ಮಾತ್ರವೇ ಮನುಷ್ಯ ಮಹಾತ್ಮರ ಸಮಾಜನಿರ್ಮಾಣ ಸಾಧ್ಯ, ಇಲ್ಲದಿದ್ದರೆ ಮನುಷ್ಯ ರೂಪದ ಮೃಗಗಳೊಂದಿಗೆ ಹೋರಾಡಿ, ಹೊಡೆದಾಡಿ, ಹೆಣಗಾಡಬೇಕಾಗುತ್ತದೆ. ಮನುಷ್ಯನು ಅಮೃತೋಪಮವಾದ ನರಜನ್ಮವನ್ನು ವಿಷಮಯ ವಾಗಿಸಿಕೊಳ್ಳುತ್ತಿದ್ದಾನಲ್ಲಾ...?

**ಕೃಪೆ: ವಿಜಯವಾಣಿ**

# ವಿದ್ಯಾರ್ಥಿ ಜ್ಞಾನ ಮಿತ್ರ

# ಭಾರತ ಪರಿಚಯ

**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ನಮ್ಮ ದೇಶ ಭಾರತ. ಇದು ಇತಿಹಾಸ ಪೂರ್ವಕಾಲದಿಂದಲೂ ಅಸ್ತಿತ್ವದಲ್ಲಿದೆ. ಭಾರತೀಯರ ಧರ್ಮಕ್ಕೆ ಹಿಂದೂಧರ್ಮ ಅಥವಾ ಸನಾತನ ಧರ್ಮ ಎಂದು ಹೆಸರು. ಧರ್ಮ ಎಂಬ ಶಬ್ದಕ್ಕೆ ಜೀವನ ವಿಧಾನ ಎಂಬ ಅರ್ಥವಿದೆ. ಮಾನವನ ಹುಟ್ಟಿನಿಂದ ಸಾವಿನವರೆಗೆ ಹೇಗೆ ಬದುಕಿ ಬಾಳಬೇಕು ಎಂಬುವುದೇ ಜೀವನ ವಿಧಾನ. ಪೂಜಾಪದ್ಧತಿ, ನಂಬಿಕೆಗಳು ಆಚಾರ, ವ್ಯವಹಾರಗಳಿಗೆ 'ಮತ' (Religion) ಎನ್ನುತ್ತಾರೆ.

ಭಾರತ, ಪೂರ್ವದಲ್ಲಿ ಬರ್ಮಾದಿಂದ ಪಶ್ಚಿಮದಲ್ಲಿ ಇಂದಿನ ಆಫ್‌ಘಾನಿಸ್ಥಾನದವರೆಗೆ, ಉತ್ತರದಲ್ಲಿ ಹಿಮಾಲಯದಾಚೆಯಿಂದ ದಕ್ಷಿಣದಲ್ಲಿ ಹಿಂದೂಮಹಾಸಾಗರದವರೆಗೆ ಹಬ್ಬಿದ ವಿಶಾಲ ಭೂ ಪ್ರದೇಶವಾಗಿತ್ತು. ಒಂದೆರಡು ಮೂರು ವರ್ಷಗಳಿಂದೀಚೆಗೆ ಅದು ಬೇರೆ ಬೇರೆ ದೇಶಗಳಾಗಿ ವಿಭಜಿತವಾಯ್ತು.

ಇಂದಿನ ಭಾರತ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಅಸ್ಸಾಂನಿಂದ ಪಂಜಾಬ್‌ವರೆಗಿನ ಭೂಪ್ರದೇಶವನ್ನೊಳಗೊಂಡಿದೆ. ಭಾರತದಲ್ಲಿ ವಿವಿಧ ಭಾಷೆಗಳನ್ನಾಡುವ 29 ರಾಜ್ಯಗಳೂ 7 ಕೇಂದ್ರಾಡಳಿತ ಪ್ರದೇಶಗಳೂ ಇವೆ.

ಮುಂದಿನ ಸಂಚಿಕೆಯಿಂದ ಇದಕ್ಕೆ ಸಂಬಂಧಿಸಿದ ಪ್ರಶ್ನೋತ್ತರಗಳ ಸರಮಾಲೆ ಪ್ರಾರಂಭವಾಗಲಿದೆ.

**ಈ ಪ್ರಶ್ನೆಗಳಿಗೆ ಉತ್ತರವನ್ನು ಓದುಗರು ಮೇಲ್ ಮೂಲಕ ಕಳುಹಿಸಬಹುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಒಂದಿಷ್ಟು ಇತಿಹಾಸ

1. ರಾಮಾಯಣದ ಕಾಲ ಯಾವುದು?
2. ಚಂದ್ರಗುಪ್ತ ಮೌರ್ಯನನ್ನು ರಾಜನನ್ನಾಗಿ ಮಾಡಿದವರು ಯಾರು?
3. ರಾಷ್ಟ್ರಕೂಟರ ರಾಜಧಾನಿ ಯಾವುದು?
4. ರಕ್ಕಸತಂಗಡಿ ಯುದ್ಧ ಯಾರ್‍ಯಾರಿಗೆ ನಡೆಯಿತು?
5. ವಿಧಾನಸೌಧ ಕಟ್ಟಿಸಿದವರು ಯಾರು?

## ಜ್ಞಾನ ವಿಜ್ಞಾನ

1. ಎಷ್ಟು ಜನ ಭಾರತೀಯ ಸಂಜಾತರಿಗೆ ನೊಬೆಲ್ ಬಹುಮಾನ ಬಂದಿದೆ, ಅವರು ಯಾರ್‍ಯಾರು?
2. ಸಸ್ಯಗಳಿಗೂ ಜೀವವಿದೆ ಎಂದು ಕಂಡುಹಿಡಿದ ವಿಜ್ಞಾನಿ ಯಾರು?
3. 'ಪೈ' ಬೆಲೆಯನ್ನು ನಿಖರವಾಗಿ ಕಂಡುಹಿಡಿದ ಗಣಿತಜ್ಞನ ಹೆಸರೇನು?
4. ನೀರಿನಲ್ಲಿರುವ ರಾಸಾಯನಿಕ ಘಟಕಗಳು ಯಾವುವು? ಯಾವ ಪ್ರಮಾಣದಲ್ಲಿದೆ?

## ಒಂದು ನೀತಿ ಕಥೆ



ಸರ್.ಎಂ. ವಿಶ್ವೇಶ್ವರಯ್ಯನವರು ಮೈಸೂರಿನ ದಿವಾನರಾಗಿದ್ದಾಗ ಮೈಸೂರು ಸಂಸ್ಥಾನವನ್ನು ಭಾರತದಲ್ಲೇ ಅಭಿವೃದ್ಧಿಶೀಲ ರಾಜ್ಯವನ್ನಾಗಿಸಿದ್ದು ಲೋಕೋತ್ತರ ಖ್ಯಾತಿಯನ್ನು ಸಂಪಾದಿಸಿದ್ದರು.

ತಮ್ಮ ಅಧಿಕಾರದ ಕೊನೇದಿನ ಸಂಜೆ ಐದು ಗಂಟೆಯವರೆಗೂ ಇದ್ದು ತಾವು ಮಾಡಬೇಕಾಗಿದ್ದ ಕೆಲಸಗಳಲ್ಲಿ ಒಂದೂ ಬಾಕಿ ಇರದಂತೆ ಮಾಡಿ ಮುಗಿಸಿ ತಮ್ಮ ಮೇಜನ್ನು ಚೊಕ್ಕಟಗೊಳಿಸಿ 5 ಗಂಟೆ ನಂತರ ತಮ್ಮ ಹಿಡಿಬೆತ್ತವನ್ನು ಹಿಡಿದು ಕಛೇರಿಯಿಂದ ಹೊರಬಂದರು. ದಿವಾನರಿಗಾಗಿ ಮೀಸಲಿದ್ದ ಕಾರು ಕಛೇರಿಯ ಪೋರ್ಟಿಕೋದಲ್ಲಿ ನಿಂತಿತ್ತು. ವಿಶ್ವೇಶ್ವರಯ್ಯನವರನ್ನು ಕಂಡ ಕೂಡಲೇ ಕಾರಿನ ಚಾಲಕ ಎಂದಿನಂತೆ ಕಾರಿನ ಬಾಗಿಲನ್ನು ತೆರೆದು ಅವರನ್ನು ಸ್ವಾಗತಿಸಿದ.

ಕೂಡಲೇ ವಿಶ್ವೇಶ್ವರಯ್ಯನವರು ಚಾಲಕನಿಗೆ ಅಯ್ಯಾ, ಇದು ದಿವಾನರಿಗಾಗಿ ಮೀಸಲಾದ ಕಾರು, ನಾನೀಗ ದಿವಾನನಲ್ಲ. ಆದ್ದರಿಂದ ಈ ಕಾರನ್ನು ಉಪಯೋಗಿಸುವ ಅಧಿಕಾರ ನನಗಿಲ್ಲ ಎಂದು ಹೇಳುತ್ತಾ ತಮ್ಮ ಖಾಸಗಿ ವಾಹನದಲ್ಲಿ ಮನೆಗೆ ತೆರಳಿದರು.

ಈ ಘಟನೆಯ ಮೂಲಕ ನಮ್ಮದಲ್ಲದ ಸ್ವತ್ತನ್ನು ಸ್ವಂತಕ್ಕೆ ಉಪಯೋಗಿಸುವುದು ಉಚಿತವಲ್ಲ ಎಂಬ ಮೇಲ್ಪಂಕ್ತಿಯನ್ನು ಹಾಕಿದರು.

# ಆನ್‌ಲೈನ್ ಶಿಕ್ಷಣ



**ಲಕ್ಷ್ಮೀಸಿಂಗ್ ಬಿ.**
**ಶೈಕ್ಷಣಿಕ ಸಮಾಲೋಚಕರು**
**ಲೈಫ್ ಕೋಚ್**
**ಲಕ್ಷ್ಮೀ ಕೋಚಿಂಗ್ ಸೆಂಟರ್**

**ಆನ್‌ಲೈನ್ ಮಾಧ್ಯಮ ಶಿಕ್ಷೆಯೋ ಅಥವಾ ಶಿಕ್ಷಣವೋ? ಇದೊಂದು ಅರ್ಥವಾಗದ ಯಕ್ಷ ಪ್ರಶ್ನೆ.**

ಇಲ್ಲಿಯವರೆಗೂ, ಶಾಲಾ ಕಾಲೇಜುಗಳಲ್ಲಿ ಮಕ್ಕಳು ಮೊಬೈಲ್ ಉಪಯೋಗಿಸುವುದು ನಿಷೇಧವಾಗಿತ್ತು. ಆದರೆ ಈಗ ಪರಿಸ್ಥಿತಿ ಹೇಗಿದೆ ಎಂದರೆ ಶಾಲೆಯೇ ಮೊಬೈಲ್ ಒಳಗಡೆ ಬಂದಿದೆ. ಮೊಬೈಲ್ ಇಲ್ಲದಿದ್ದರೆ ಮಕ್ಕಳ ಶಿಕ್ಷಣವೇ ನಿಂತು ಹೋಗುವ ಪರಿಸ್ಥಿತಿ ಎದುರಾಗಿದೆ. ಕರೋನಾ ಸೋಂಕಿನ ಆತಂಕದಿಂದಾಗಿ ಮಕ್ಕಳು ಮನೆಯಲ್ಲಿಯೇ ಉಳಿಯುವ ಸಂದರ್ಭ ಬಂದಿದೆ. ಆನ್‌ಲೈನ್ ಶಿಕ್ಷಣ ಅನಿವಾರ್ಯವಾಗಿದೆ. ಯಾವುದರಿಂದ ನಾವು ಮಕ್ಕಳನ್ನು ದೂರ ಇಡಬೇಕೆಂದು ಒದ್ದಾಡುತ್ತಿದ್ದೆವೋ, ಅದನ್ನೇ ಈಗ ಅವರ ಕೈಯಲ್ಲಿ ಇಟ್ಟು ಉಪಯೋಗಿಸಿ ಎಂದು ಹೇಳುವಂತಾಗಿದೆ.

ಆದರೆ ಈಗ ಬೇರೆ ಸಾಧ್ಯತೆಗಳು ಇಲ್ಲ. ಮಕ್ಕಳನ್ನು ಶಿಕ್ಷಣದಿಂದ ಸಂಪೂರ್ಣ ವಿಮುಖರಾಗದಂತೆ ನೋಡಿಕೊಳ್ಳುವ ಒಂದು ಪ್ರಯತ್ನ. ಈ ಆನ್‌ಲೈನ್ ಶಿಕ್ಷಣ.

ಈ ಆನ್‌ಲೈನ್ ಶಿಕ್ಷಣದ ಸಾಧಕ, ಬಾಧಕಗಳ ವಿಚಾರ ಮಾಡುವುದಾದರೆ ಕೆಲವೊಂದು ವಿಚಾರಗಳು ಹೀಗಿವೆ.

ಮೊದಲಿಗೆ, ಇದರ ಭಾದಕಗಳ ಅಂದರೆ ತೊಂದರೆಗಳ ಕುರಿತು ಹೇಳುವುದಾದರೆ–

ನಿತ್ಯ ಮೂರು ನಾಲ್ಕು ಗಂಟೆ ಡಿಜಿಟಲ್ ಸ್ಕ್ರೀನ್ ನೋಡುವುದರಿಂದ ಕಣ್ಣು ಹಾಳಾಗುವ, ತಲೆನೋವು ಬರುವ ಮತ್ತು ಒತ್ತಡ ಹೆಚ್ಚಾಗುವ ಸಮಸ್ಯೆಗಳು ಹೆಚ್ಚಾಗುವ ಸಾಧ್ಯತೆಗಳು ಇದೆ. ವರ್ಚುವಲ್ ಪ್ರಪಂಚಕ್ಕೆ ಕಾಲಿಟ್ಟ ಈಗಿನ ಮಕ್ಕಳು ತಮ್ಮ ಬಾಲ್ಯಾವಸ್ಥೆಯನ್ನು ಕಳೆದುಕೊಳ್ಳುವ ಪ್ರಸಂಗ ಬಂದಿದೆ. ಕುಳಿತಲ್ಲಿಯೇ ಕುಳಿತು ಟಿ.ವಿ, ಮೊಬೈಲ್ ನೋಡುವ ಅಭ್ಯಾಸದಿಂದಾಗಿ ಮಕ್ಕಳು ಆಲಸಿಗಳಾಗುತ್ತಿದ್ದಾರೆ. ಆಹಾರದ ಅಭ್ಯಾಸ ಕ್ರಮ ತಪ್ಪಿದೆ. ತಡವಾಗಿ ಮಲಗಿ, ತಡವಾಗಿ ಏಳುವ ಅಭ್ಯಾಸ ಬೆಳೆದಿದೆ. ಯಾರ ಜೊತೆಯೂ ಬೆರೆಯದೆ ಏಕಾಂತದಲ್ಲಿ ಇರುವ ಅಭ್ಯಾಸದಿಂದಾಗಿ ಮಕ್ಕಳು ಅಂತರ್ಮುಖಿಗಳಾಗುತ್ತಿದ್ದಾರೆ. ಮಾನಸಿಕ ಆರೋಗ್ಯ ಹದಗೆಡುತ್ತಿದೆ.

ಕೋವಿಡ್ ಲಾಕ್‌ಡೌನ್‌ಗಿಂತ ಮುಂಚೆಯೂ ಇಂತಹ ಪ್ರಕರಣಗಳು ಇದ್ದವು. ಆದರೆ ಈಗ ಆನ್‌ಲೈನ್ ಶಿಕ್ಷಣದಿಂದ ಈ ಸಮಸ್ಯೆ ಮೊದಲಿಗಿಂತ ಗಂಭೀರವಾಗಿದೆ ಸೃಜನಾತ್ಮಕ ಕೌಶಲ್ಯ ಅತ್ಯಂತ ಕಡಿಮೆಯಾಗಿದೆ. ಕಲಿಕೆಗೆ ಮಿತಿ ಉಂಟಾಗಿದೆ.

ಹೈಸ್ಕೂಲ್ ವಿದ್ಯಾರ್ಥಿಗಳಲ್ಲಿ ಗಮನೀಯ ಬೆಳವಣಿಗೆ ಆಗಿದೆ. ಯಾವುದೇ ವಿಷಯ, ಯಾವುದೇ ವಿಚಾರ ಅಂತರ್ಜಾಲದಲ್ಲಿ ಬಹು ಸುಲಭವಾಗಿ ಸಿಗುವುದರಿಂದ ತಮಗೆ ಬೇಕಾದದ್ದು, ಬೇಡವಾದದ್ದು ಎಲ್ಲವನ್ನೂ ನೋಡುವ ಚಟ ಬೆಳೆಯುತ್ತಿದೆ. ಪ್ರಾಪಂಚಿಕ ಜ್ಞಾನದ ಮಟ್ಟ ಕಡಿಮೆ ಆಗುವ, ಮುಂದೆ ಜೀವನದಲ್ಲಿ ಸಮಸ್ಯೆಗಳು ಬಂದಾಗ ಅದನ್ನು ಎದುರಿಸಿ, ನಿಭಾಯಿಸುವ ಸಾಮರ್ಥ್ಯ ಕಳೆದುಕೊಳ್ಳುವ ಭಯ ಉಂಟಾಗುತ್ತಿದೆ. ಸುಲಭವಾಗಿ ಮಾಹಿತಿಯನ್ನು ಅಂತರ್ಜಾಲದಲ್ಲಿ ಸಂಗ್ರಹಿಸುವ ಅಭ್ಯಾಸ ಬೆಳೆದು, ಸ್ವತಂತ್ರವಾಗಿ ಯೋಚಿಸುವ, ಸ್ವಂತ ಬುದ್ಧಿ ಉಪಯೋಗಿಸುವ ಸಾಮರ್ಥ್ಯ ಇಲ್ಲದಂತಾಗುತ್ತಿದೆ. ಆಲೋಚಿಸುವ ಶಕ್ತಿಯನ್ನೇ ಕಳೆದುಕೊಳ್ಳುತ್ತಿದ್ದಾರೆ. ಪೂರ್ಣ ಪ್ರಮಾಣದಲ್ಲಿ ವರ್ಚುವಲ್ ಪ್ರಪಂಚಕ್ಕೆ ಅವಲಂಬಿತರಾಗಿದ್ದಾರೆ.

ಕಲಿಯುವ ಉತ್ಸಾಹಕ್ಕೆ ಒಂದು ಮಿತಿ ಬಂದು ಇಂದಿನ ಮಕ್ಕಳು ಬಾವಿಯೊಳಗಿನ ಕಪ್ಪೆಗಳಂತಾಗಿದ್ದಾರೆ.

ಪಾಠ ಕಾಲು ಗಂಟೆ, ಆಟ ಮುಕ್ಕಾಲು ಗಂಟೆಯಾಗಿದೆ. ಆನ್‌ಲೈನ್ ಕ್ಲಾಸ್‌ನ ನೆಪದಲ್ಲಿ ರೂಮ್ ಸೇರುವುದು ಬಾಗಿಲು ಹಾಕಿ ಆನ್‌ಲೈನ್ ಗೇಮ್ ಆಡಲು ಕೂರುವುದು ಸಾಮಾನ್ಯ ವಿಷಯವಾಗಿದೆ. ರೂಮ್‌ನೊಳಗೆ ಯಾರಾದರೂ ಬಂದರೆ ಗೇಮ್‌ಲೈನ್‌ನಿಂದ ಆನ್‌ಲೈನ್ ಕ್ಲಾಸಿಗೆ ಬಹುಬೇಗ ಶಿಫ್ಟ್ ಆಗುವ ಚಾಣಾಕ್ಷತನ ಬಂದಿದೆ.

ಮೊಬೈಲ್ ಗೇಮ್‌ಗೆ ಹೇಗೆ ಅಡಿಕ್ಟ್ ಆಗಿದ್ದಾರೆಂದರೆ ಅವರ ಬಾಯಲ್ಲಿ ಈಡಿಜ, ಮಟಟ ಹೊಡಿ, ಬಡಿ ಎಂಬ ಪದಗಳು ಬಹಳ ಲೀಲಾಜಾಲವಾಗಿ ಬರುತ್ತಿದೆ. ಸಂಸ್ಕಾರ ಕಳೆದುಕೊಳ್ಳುವ ಸ್ಥಿತಿ ತಲುಪಿದ್ದಾರೆ. ಎಲ್ಲರೊಂದಿಗೆ ಸಂಪೂರ್ಣ ಸಂಪರ್ಕ, ಸಂಬಂಧ ಕಡಿದುಕೊಂಡು ಕತ್ತಲ ದ್ವೀಪದಂತಾಗುತ್ತಿದ್ದಾರೆ.

ಕಲಿಕೆಯಲ್ಲಿ ಜಾಣರಾಗಿದ್ದ ಮಕ್ಕಳು ದಿನಕಳೆದಂತೆ ಹಿಂದುಳಿಯುತ್ತಿದ್ದಾರೆ, ಮಂಗನ ಕೈಯಲ್ಲಿ ಮಾಣಿಕ್ಯ ಸಿಕ್ಕ ಹಾಗೆ ಆಗಿದೆ ಈಗಿನ ಮಕ್ಕಳ ಪರಿಸ್ಥಿತಿ.

ಆನ್‌ಲೈನ್ ಶಿಕ್ಷಣದ ನೆಪದಲ್ಲಿ ವಾಟ್ಸಪ್ ಇನ್ಸ್ಟಗ್ರಾಂ ಟ್ವೀಟರ್, ಫೇಸ್‌ಬುಕ್ ಮುಂತಾದವುಗಳ ಬಳಕೆ ಹೆಚ್ಚಾಗಿದೆ. ಅರಿತೋ ಅರಿಯದೆಯೋ ದಿನ ನಿತ್ಯದ ತಮ್ಮೆಲ್ಲಾ ಆಗು ಹೋಗುಗಳನ್ನು ಅಪ್‌ಲೋಡ್ ಮಾಡಿ ಮುಂದಾಗುವ ಅನಾಹುತಗಳಿಗೆ ದಾರಿ ಮಾಡುತ್ತಿದ್ದಾರೆ. ಅವರಿಗೆ ಅದರ ಅರಿವು ಇರುವುದಿಲ್ಲ, ತಿಳಿ ಹೇಳಿದರೆ ಕೇಳುವ ಮನಸ್ಥಿತಿಯೂ ಇಲ್ಲ. ಆನ್‌ಲೈನ್ ಶಿಕ್ಷಣದಿಂದ ಗುರು ಶಿಷ್ಯರ ಭಾವನಾತ್ಮಕ ಒಡನಾಟ ಇಲ್ಲದೆ, ಇಬ್ಬರ ಮಧ್ಯೆ ಒಂದು ನೀರಸ ಸಂಬಂಧ ಬೆಳೆಯುತ್ತಿದೆ.

ಎಲ್ಲರಿಗಿಂತ ನಮಗೆ ತುಂಬಾ ವಿಷಯಗಳು ಗೊತ್ತಿದೆ. ನಮ್ಮ ಅಂಗೈಯಲ್ಲೇ ಪ್ರಪಂಚ ಇದೆ ಎಂಬುದರ ಭ್ರಮೆ ಮಕ್ಕಳಲ್ಲಿ ಈ ಆನ್‌ಲೈನ್ ಶಿಕ್ಷಣ ಉಂಟು ಮಾಡುತ್ತಿದೆ. ಇಷ್ಟೆಲ್ಲಾ ಆನ್‌ಲೈನ್ ಶಿಕ್ಷಣದ ಬಾಧಕಗಳಿದ್ದರೂ ಒಂದಂತು ನಿಜ. ಇಂದಿನ ಪರಿಸ್ಥಿತಿಯಲ್ಲಿ ಆನ್‌ಲೈನ್ ಶಿಕ್ಷಣ ಅನಿವಾರ್ಯವಾಗಿದೆ ಮತ್ತು ಅವಶ್ಯಕವು ಆಗಿದೆ.

ಆನ್‌ಲೈನ್ ಶಿಕ್ಷಣದಲ್ಲಿ ಪೋಷಕರು ಮತ್ತು ಶಿಕ್ಷಕರೂ ಜವಾಬ್ದಾರಿಯುತವಾಗಿ ವರ್ತಿಸಿದರೆ, ಹಲವು ಸಮಸ್ಯೆಗಳನ್ನು ನಿಭಾಯಿಸಬಹುದು, ಕೆಲವೊಂದು ಹೀಗಿದೆ.

**ಪುಟ 10 ಕ್ಕೆ ➢**

➢ ಪುಟ 5 ರಿಂದ.....

ಅಕ್ಷಮ್ಯವೆಂದು, ಶೀಲಶುದ್ಧಿಯಿಲ್ಲದ ಕಲಾವಿದರೊಬ್ಬರನ್ನು ಬಣ್ಣಿಸುವಾಗ, ಸತತವಾದ ಆತನ ತಪಸ್ಸಿನಿಂದ ಕಲಾಭಿವೃದ್ಧಿಯಾಯಿತೆಂದು ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದನ್ನು ಉದಾಹರಣೆಯಾಗಿ ಪ್ರಸ್ತಾಪಿಸಿ "ಆತನಿಂದ ಕಲಾಭಿವೃದ್ಧಿಯಾಯಿತೆಂಬುದನ್ನು ಕೃತಜ್ಞತೆಯಿಂದ ಒಪ್ಪಿಕೊಳ್ಳೋಣ. ಹಾಗೆ ಕೃತಜ್ಞತೆಯನ್ನು ಸೂಚಿಸಿ ಪ್ರಶಂಸಿಸುವುದು ಮಾನವಧರ್ಮ. ಆದರೆ, ತಪಸ್ಸೆಂಬ ಮಾತನ್ನು ಬಿಟ್ಟುಬಿಡೋಣ. ಹಾಗೆ ಮಾಡಿದರೆ ಅದು ಆ ಪದದ ದುರುಪಯೋಗವಾಗುತ್ತದೆ. ಶೀಲಶುದ್ಧಿಯುಳ್ಳವನಾಗಿ, ಧರ್ಮನಿಷ್ಠೆಯಿಂದ ಯಾವುದಾದರು ಮಹೋತ್ತಮ ಕಾರ್ಯಸಾಧನೆಗಾಗಿ ಸತತವಾಗಿ ಪ್ರಯತ್ನಿಸಿ ಶ್ರಮಿಸುವವನ ವಿಚಾರದಲ್ಲಿ ಮಾತ್ರವೇ ತಪಸ್ಸೆಂಬ ಪ್ರಯೋಗ ಸುಸಂಗತ". ಎಂದು ಹೇಳುತ್ತಿದ್ದರು. ಅದ್ಭುತಶಕ್ತಿ ಅಥವಾ ಕಲಾಸಿದ್ಧಿ ಎಂದೆಲ್ಲ ಎಷ್ಟು ಬೇಕಾದರೂ ಕೊಂಡಾಡಬಹುದು ಅಷ್ಟೇ" ಎಂಬುದು ಅವರ ವಿಚಾರವಾಗಿತ್ತು. ಯಾರನ್ನಾದರೂ ಪ್ರಶಂಸಿಸುವಾಗ ಅವರೆಷ್ಟೇ ಒಳ್ಳೆಯವರಾಗಿದ್ದರೂ 'ಶ್ರೀಮನ್ನಾರಾಯಣನಿಗಿಂತ ಒಂದು ಕೈಮೇಲೆಂದು ಹೊಗಳಿದರೆ ಅದು ದೊಡ್ಡ ತಪ್ಪು. ಮನುಷ್ಯರು ಎಂಥವರೇ ಆಗಿದ್ದರೂ ಹಾಗೆ ಹೋಲಿಸುವುದು ಅವರ ವಿದ್ವತ್ತಿನ ದುರುಪಯೋಗ. ಅದರಿಂದ ಹೇಗೆ ಮಾತಾಡಬೇಕು, ಹೇಗೆ ಬರೆಯಬೇಕು ಅನ್ನುವುದನ್ನು ಸಾವಧಾನವಾಗಿ ಯೋಚಿಸಿ ನಿರ್ಧರಿಸಿಕೊಳ್ಳುವುದು ವಿವೇಕವೆಂದು ಅವರು ಸದಾ ಹೇಳುತ್ತಿದ್ದರು.

ಕನ್ನಡ ಸೊಗಸಾದ ಭಾಷೆ, ಸುಲಿದ ಬಾಳೆಯ ಹಣ್ಣಿನಂದದಿ... ಎಂದು ಕವಿ ಮಹಲಿಂಗರಂಗ ಬಣ್ಣಿಸಿರುವಂತೆ ಅದರ ಲಾಲಿತ್ಯವನ್ನು, ಸೊಗಸನ್ನು ಉಳಿಸಿಕೊಳ್ಳಬೇಕಾದರೆ ಸಮರ್ಥವಾಗಿ, ಸೂಕ್ತವಾಗಿ, ಶುದ್ಧವಾಗಿ ಅದನ್ನು ಮಾತಿನಲ್ಲಿ, ಬರಹದಲ್ಲಿ ಬಳಸುವುದು ಅಗತ್ಯ. ಇಲ್ಲವಾದಲ್ಲಿ ಎಷ್ಟೋ ಪದಗಳು ತಮ್ಮ ಸತ್ತ್ವವನ್ನು ಕಳೆದುಕೊಂಡು ಹಳಸಲು ಎನಿಸಿಬಿಡುತ್ತವೆ, ರಸಹೀನವೆನಿಸಿಬಿಡುತ್ತವೆ.

ಇಂದಿನ ಜಾಗತೀಕರಣದ ಪರಿಸರದಲ್ಲಿ ಕನ್ನಡಭಾಷೆಯ ಸೊಗಸು ಅತಿಯಾದ ಮಾಲಿನ್ಯಕ್ಕೆ ಒಳಗಾಗುತ್ತಿರುವ ಸಂದರ್ಭದಲ್ಲಿ ಕನ್ನಡ ಭಾಷೆಯನ್ನು ಬೋಧಿಸುವ ಅಧ್ಯಾಪಕರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿದರೆ ಡಾ|| ಎ. ಆರ್. ಕೃಷ್ಣಶಾಸ್ತ್ರಿಗಳ ಕನ್ನಡ ಭಾಷಾಭಿಮಾನದ ಪರಂಪರೆಯನ್ನು ಮುಂದುವರಿಸಿದ ಹಾಗೂ ಆಗುತ್ತದೆ ಮುಂದಿನ ಜನಾಂಗಕ್ಕೆ ಪರಿಶುದ್ಧವಾದ ಕನ್ನಡವನ್ನು ಕಲಿಸಿದ ಸಾರ್ಥಕತೆಯು ಲಭಿಸುತ್ತದೆ.

ಡಾ|| ಎ.ಆರ್.ಕೃಷ್ಣಶಾಸ್ತ್ರಿಗಳಂತೆ ನಾಡು– ನುಡಿಯನ್ನು ಕುರಿತ ಅಭಿಮಾನವನ್ನು ನಾವೂ ನಮ್ಮದಾಗಿಸಿಕೊಳ್ಳಬಹುದಲ್ಲವೇ? ಅವರಂತೆ ಶಿಷ್ಯವಾತ್ಸಲ್ಯವನ್ನು ತೋರುತ್ತ ಶಿಷ್ಯರ ಮೆಚ್ಚಿನ ಅಧ್ಯಾಪಕ ರಾಗಬಹುದಲ್ಲವೇ?

●

**ಬಾಲ್ಯ ಕಳೆಯುವ ತನಕವಾದರೂ, ಅಂದರೆ ಎಸ್.ಎಸ್.ಎಲ್.ಸಿ. ಕಳೆಯುವವರೆಗಾದರೂ ಪರಿಸರದ ಭಾಷೆಯ ಮೂಲಕ ಬೆಳೆಯದಿದ್ದರೆ, ಭಾವೀ ಜೀವನದಲ್ಲಿ ಆ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಲು ಸಾಧ್ಯವಿಲ್ಲ. ಎಸ್.ಎಸ್.ಎಲ್.ಸಿ. ಮುಗಿಯುವ ವರೆಗಾದರೂ ಕರ್ನಾಟಕದಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮ ವಾಗಬೇಕು.**

***– ಡಾ. ಎಸ್. ಎಲ್. ಭೈರಪ್ಪ***

➢ ಪುಟ 9 ರಿಂದ.....

1. ಮೊಬೈಲ್‌ನಲ್ಲಿ ಅಥವಾ ಲ್ಯಾಪ್‌ಟಾಪ್‌ನಲ್ಲಿ ಇರುವುದಷ್ಟೇ ಪ್ರಪಂಚವಲ್ಲ ಎಂಬುದನ್ನು ಮಕ್ಕಳಿಗೆ ಮೊದಲು ಮನದಟ್ಟು ಮಾಡಬೇಕು.
2. ಮಕ್ಕಳು ಕೇಳಿ ಕಲಿಯುವುದಕ್ಕಿಂತ ನೋಡಿ ಕಲಿಯುವುದೇ ಹೆಚ್ಚು. ಅಂದ ಮೇಲೆ ನಾವು ಅವರಿಗೆ ಮಾದರಿಯಾಗಿರಬೇಕು.
3. ಆನ್‌ಲೈನ್ ಶಿಕ್ಷಣದಲ್ಲಿ ಶಿಕ್ಷಕರಿಗಿಂತ, ಪೋಷಕರಿಗೆ ಹೆಚ್ಚು ಜವಾಬ್ದಾರಿ. ಮಕ್ಕಳು ಆನ್‌ಲೈನ್ ಶಿಕ್ಷಣದಲ್ಲಿ ಏನು ಮಾಡುತ್ತಿದ್ದಾರೆ, ಏನನ್ನು ಕಲಿಯುತ್ತಿದ್ದಾರೆ ಎಂಬುದರತ್ತ ನಿತ್ಯವೂ ಗಮನ ಹರಿಸಲೇಬೇಕು.
4. ಮೊಬೈಲ್ ಅಥವಾ ಇತರ ಯಾವುದೇ ಮಾಧ್ಯಮವನ್ನಾಗಲಿ ಮಕ್ಕಳ ಕೈಗೆ ಎಷ್ಟು ಹೊತ್ತು ಕೊಡಬೇಕು ಎಂಬ ಕಾಲಮಿತಿ ಇರಿಸಬೇಕು.
5. ಮಕ್ಕಳಿಗೆ ಚಟುವಟಿಕೆಗಳಿಂದ ಕೂಡಿದ ಕಲಿಕೆಗಾಗಿ ಉತ್ತೇಜಿಸಬೇಕು ಅಂದರೆ ಓದುವುದು, ಚಿತ್ರ ಬರೆಯುವುದು, ವಿವಿಧ ರೀತಿಯ ಪಠ್ಯ ಮಾದರಿಗಳನ್ನು ತಯಾರಿಸುವುದು, ಮುಂತಾದವು Virtual is virtual, real is real. ಮಕ್ಕಳು ಈಗ ಮನೆಯಲ್ಲಿಯೇ ಇರುವುದರಿಂದ, ಬಿಡುವಿನ ವೇಳೆಯಲ್ಲಿ ಮನೆಯಲ್ಲಿ ತಂದೆ, ತಾಯಿ ಮತ್ತು ಇತರರಿಗೆ ಅವರ ಕೆಲಸಗಳಲ್ಲಿ ಸಹಾಯ ಮಾಡುವುದನ್ನು ಹೇಳಿ ಕೊಡಬೇಕು.
6. ಶಿಕ್ಷೆ ಕೊಡುವುದರಿಂದ ಲಾಭವಿಲ್ಲ. ಪ್ರೀತಿ ಅಕ್ಕರೆಯಿಂದ ಮೊಬೈಲ್ ಒಂದು ಚಟವಾಗದಂತೆ ನೋಡಿಕೊಳ್ಳಬೇಕು.
7. ಆನ್‌ಲೈನ್ ಪಾಠದ ಅವಧಿಯ ಹೊರತಾಗಿ ಬೇರೆ ಸಮಯದಲ್ಲಿ ಮೊಬೈಲ್ ಬಳಕೆಯನ್ನು ನಿಯಂತ್ರಿಸಬೇಕು.
8. ಆನ್‌ಲೈನ್ ಶಿಕ್ಷಣದಿಂದ ನಮ್ಮ ಮಕ್ಕಳು ಹೈಟೆಕ್ ಆದರು ಎಂಬ ಭ್ರಮೆ ನಮಗೆ ಬೇಡ.
9. ಆನ್‌ಲೈನ್ ಶಿಕ್ಷಣದಿಂದ ಮಕ್ಕಳ ಸಾಮಾಜಿಕ, ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಕುಂದು ಬಾರದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಸಮರ್ಥ ರೀತಿಯಲ್ಲಿ ನಾವು ನಿಭಾಯಿಸಬೇಕು.
10. ಮಕ್ಕಳ ಕಲಿಕೆಗೆ ಮಿತಿ ಇರುವುದಿಲ್ಲ. ಆದರೆ ಈಗ ಆನ್‌ಲೈನ್ ಶಿಕ್ಷಣದಿಂದ ನಾಲ್ಕು ಗೋಡೆಗಳ ಮಧ್ಯವೇ ಇರುವುದರಿಂದ ಹೊಸತನ್ನು ಕಲಿಯುವ ಸಾಮರ್ಥ್ಯವು ಕುಗ್ಗಬಹುದು. ಆದ್ದರಿಂದ ಪೋಷಕರು ಮಕ್ಕಳ ಜೊತೆ ಆದಷ್ಟು ಇರಬೇಕು. ಅವರನ್ನು ನಿರ್ಲಕ್ಷ್ಯ ಮಾಡದೆ ನಮ್ಮ ನಡವಳಿಕೆಯ ಮೂಲಕ ಅವರನ್ನು ತಿದ್ದಬೇಕು.

ಒಂದೇ ದಿನದಲ್ಲಿ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲ. ಸಂಯಮವಿರಲಿ ಮಕ್ಕಳ ಜೊತೆ ತಾಳ್ಮೆಯಿಂದಿರಿ.

ಆದಷ್ಟು ಶಿಕ್ಷಣದಿಂದ ಹೊಸ ಹೊಸ ವಿಷಯಗಳನ್ನು ಹೊಸ ಹೊಸ ಟೆಕ್ನಲಾಜಿಯನ್ನು ಮಕ್ಕಳು ಕಲಿಯಬಹುದು. ಆದರೆ 16 ವಯಸ್ಸಿನ ಒಳಗಿನ ಮಕ್ಕಳಿಗೆ ಅಂದರೆ ಹದಿಹರೆಯದ ಮಕ್ಕಳಿಗೆ ವಿಪರೀತ ಕುತೂಹಲದಿಂದಾಗಿ ಕೆಟ್ಟದ್ದನ್ನು ಕಲಿಯುವ ಸಾಧ್ಯತೆಗಳು ತುಂಬಾ ಹೆಚ್ಚು. ಆದ್ದರಿಂದ ಈ ವಯಸ್ಸಿನ ಮಕ್ಕಳು, ಶಿಕ್ಷಕರ ಮತ್ತು ಪೋಷಕರ ಮಾರ್ಗದರ್ಶನ ತೆಗೆದುಕೊಳ್ಳುವುದು ಒಳ್ಳೆಯದು.

ಒಟ್ಟಿನಲ್ಲಿ ಎಲ್ಲವೂ ಒಂದು ಇತಿಮಿತಿಯಲ್ಲಿದ್ದರೆ ಒಳ್ಳೆಯದು. ಆನ್‌ಲೈನ್ ಶಿಕ್ಷಣವನ್ನು ನಿರಾಕರಿಸದೇ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡದೆ ಮಕ್ಕಳಿಗೆ ಒಳಿತಾಗುವ ರೀತಿಯಲ್ಲಿ ಶಿಕ್ಷಣ ನೀಡುವುದು ಸೂಕ್ತ ಎಂಬುದು ನನ್ನ ಅನಿಸಿಕೆ.

## ಸಂಪಾದಕೀಯ

# ದೀಪಾವಳಿ ಎಂದರೆ...

ದೀಪಾವಳಿ ಎಂದರೆ ದೀಪಗಳ ಆವಳಿ ಅಥವಾ ಸಾಲು ಎಂದರೆ ಮಾತ್ರ ಸಾಲದು, ದೀಪಾವಳಿಯಿಂದ ತಿಳಿದುಕೊಳ್ಳುವುದು, ಜೀವನಕ್ಕೆ ಅಳವಳಡಿಸಿಕೊಳ್ಳುವುದು ಬಹಳಷ್ಟಿದೆ. ಅದರಲ್ಲೂ ಒಂದು ಸಂಘದ ಕಾರ್ಯಕರ್ತನಿಗಂತೂ ಇನ್ನೂ ಹೆಚ್ಚಿನ ಮಹತ್ವವಿದೆ. ದೀಪಾವಳಿಯ ಮಹತ್ವ ತಿಳಿಸಲು ನಾನು ಒಂದು ಕಥೆ ಹೇಳಲು ಇಚ್ಛಿಸುತ್ತೇನೆ.

ಸೂರ್ಯ ನಾನು ಇಡೀ ಜಗತ್ತಿಗೆ ನಿರಂತರವಾಗಿ ಬೆಳಕನ್ನು ನೀಡುತ್ತಿದ್ದೇನೆ. ನನಗೂ ಒಂದು ದಿನ ಆರಾಮವಾಗಿ ಯಾವುದೇ ಕೆಲಸ ಮಾಡದೇ ಇರಬೇಕೆಂಬ ಆಸೆಯಾಗುತ್ತಿದೆ ಎಂದು ಎಲ್ಲರ ಬಳಿ ಹೇಳಿದರಂತೆ. ಎಲ್ಲರೂ ಸೂರ್ಯನ ಕಾರ್ಯ ಮಹತ್ತರವಾದದ್ದು, ಅವರ ಕೆಲಸವನ್ನು ಯಾರೂ ಮಾಡಲು ಸಾಧ್ಯವಿಲ್ಲ. ಇಡೀ ಜಗತ್ತಿಗೆ ನಾವೆಲ್ಲಾ ಬೆಳಕನ್ನು ನೀಡಲು ಆಗುವುದಿಲ್ಲವೆಂದು ಹಿಂದೆ ಸರಿದರಂತೆ. ಆದರೆ ಒಂದು ದೀಪ ಮಾತ್ರ ನೋಡೋಣ ನಾನು ಪ್ರಯತ್ನಿಸುತ್ತೇನೆ. ನಾನು ಸೂರ್ಯನ ಕೆಲಸವನ್ನು ಸೂರ್ಯನಿಗೆ ಸಮಾನವಾಗಿ ಮಾಡಲಾರೆನೇನೋ, ಆದರೆ ಸೂರ್ಯನಿಗೆ ಒಂದು ದಿನಕ್ಕಾದರೂ ವಿರಾಮ ನೀಡುವ ಪ್ರಯತ್ನ ಮಾಡುತ್ತೇನೆಂದು ಹೇಳಿತಂತೆ. ಎಲ್ಲರಿಗೂ ಗೊತ್ತು ಸೂರ್ಯನಿಗೆ ಸಮಾನವಾಗಿ ಯಾರೂ ಬೆಳಕನ್ನು ನೀಡಲಾರರೆಂದು, ಆದರೆ ದೀಪ ಆ ಕಾರ್ಯವನ್ನು ಮಾಡಲು ಪ್ರಯತ್ನಿಸುತ್ತೇನೆಂದು ಹೇಳಿ ಸ್ವಲ್ಪವಾದರೂ ಅಂಧಕಾರವನ್ನು ಅಳಿಸಿತು. ಹಾಗೆಯೇ ಸಂಘಟನೆಯಲ್ಲೂ ಹಿರಿಯರು ಮಾಡಿದ ಸೇವಾಕಾರ್ಯವನ್ನು ನಮ್ಮ ಕೈಯಲ್ಲಿ ಮಾಡಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ ಎಂದು ತಿಳಿದು ಸುಮ್ಮನೆ ಕೂಡ ಬಾರದು. ಅವರ ದಾರಿಯಲ್ಲಿ ನಡೆದು ಅವರ ಸೇವಾಕಾರ್ಯವೂ ವ್ಯರ್ಥವಾಗದಂತೆ ನಾವು ನಮ್ಮ ಪ್ರಯತ್ನವನ್ನು ಮಾಡಬೇಕು ಮತ್ತು ನಮ್ಮ ಹಿರಿಯರ ಆಶೋತ್ತರಗಳನ್ನು ಈಡೇರಿಸಲು ಪ್ರಯತ್ನ ಪಡಬೇಕು.

ದೀಪದಿಂದ ಇನ್ನೊಂದು ವಿಷಯವನ್ನು ಕಲಿಯಬಹುದು, ಅದೇನೆಂದರೆ ಒಂದು ದೀಪ ಬೆಳಗಬೇಕೆಂದರೆ ಕೇವಲ ಒಂದು ದೀಪವಿದ್ದರೆ ಸಾಲದು, ಒಂದು ಬತ್ತಿ ಇದ್ದರೆ ಸಾಲದು ಅಥವಾ ಬರೀ ಎಣ್ಣೆಯಿದ್ದರೆ ಸಾಲದು. ಮೂರು ಒಂದಾಗಬೇಕು, ನಂತರವೇ ದೀಪ ಬೆಳಗಿ ಬೆಳಕನ್ನು ನೀಡಿ, ಅಂಧಕಾರವನ್ನು ಹೋಗಲಾಡಿಸಲು ಸಾಧ್ಯ. ಇಲ್ಲಿ ಏನಾದರೂ ದೀಪ ನನ್ನಿಂದಲೇ ಬೆಳಕನ್ನು ನೀಡಲು ಸಾಧ್ಯವೆಂಬ ಅಹಂಕಾರ ಪಟ್ಟರೆ, ಬತ್ತಿ ಮತ್ತು ಎಣ್ಣೆಯಿಲ್ಲದಿದ್ದರೂ ದೀಪ ಬೆಳಗಲು ಸಾಧ್ಯವಿಲ್ಲ, ಹಾಗೆಯೇ ಬತ್ತಿಗಾದರೂ ಅಥವಾ ಎಣ್ಣೆಗಾದರೂ ಈ ರೀತಿಯ ಅಹಂಕಾರ ಬಂದರೆ ಬೆಳಕನ್ನು ನೀಡಲು ಸಾಧ್ಯವಿಲ್ಲ. ಇಲ್ಲಿ ದೀಪವೂ ದೊಡ್ಡದಲ್ಲ, ಹಾಗೆಯೇ ಬತ್ತಿ ಅಥವಾ ಎಣ್ಣೆಯೂ ದೊಡ್ಡದಲ್ಲ. ಎಲ್ಲವೂ ಒಂದಾಗಿ ಸೇರಿದರೆ ಮಾತ್ರ ಬೆಳಕು ನೀಡಲು ಸಾಧ್ಯ. ಸಂಘಟನೆಯಲ್ಲೂ ನಾವು ಇದನ್ನು ಅರಿತುಕೊಳ್ಳಬೇಕು. ಕೇವಲ ಒಬ್ಬರಿದ್ದರೆ ಮಾತ್ರ ಸಂಘಟನೆ ಮಾಡಲು ಸಾಧ್ಯವಿಲ್ಲ. ಸಂಘಟನೆಯಲ್ಲಿ ಎಲ್ಲವೂ ನನ್ನಿಂದಲೇ ಎಂಬ ಅಹಂಕಾರದ ಭಾವನೆ ಒಂದಿನಿತು ಒಳ್ಳೆಯದಲ್ಲ. ಎಲ್ಲರೂ ಸೇರಿ ಕಾರ್ಯ ಕೈಗೊಂಡಾಗ ಮಾತ್ರ ಸೇವಾಕಾರ್ಯ ಸಾಧ್ಯ.

**ದೀಪದಿಂದ ದೀಪವ ಹಚ್ಚಬೇಕು ಮಾನವ,**
**ಮನಸಿನಿಂದ ಮನಸನು ಬೆಳಗಬೇಕು ಮಾನವ,**
**ಮೇಲು ಕೀಳು ಭೇದ ನಿಲ್ಲಲು.**

----------

ಒಂದು ಸಂಘಟನೆ ತನ್ನ ಸಮಾಜಸೇವೆಯನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಬೇಕೆಂದರೆ ಆ ಸಂಘಟನೆಯ ಸದಸ್ಯರ ಸಂಖ್ಯೆಯ ಮೇಲೆ ಮಾತ್ರ ಅವಲಂಬಿತವಾಗಿರುತ್ತದೆ. ಕೇವಲ ಹತ್ತೈದು ಜನ ಸೇರಿ ಸಂಘಟನೆಯನ್ನು ನಡೆಸಿಕೊಂಡು ಹೋಗಲು ಸಾಧ್ಯವಿಲ್ಲ. ಒಂದು ಅನ್ನದ ಅಗಳು ನೆಲದ ಮೇಲೆ ಬಿದ್ದರೆ ಕೇವಲ ಒಂದು ಇರುವೆ ಅದನ್ನು ಹೊತ್ತೊಯ್ಯಲಾಗದು. ಇರುವೆಗಳು ಗುಂಪು ಸೇರಿ ಆ ಅನ್ನದ ಅಗಳನ್ನು ಸುಸೂತ್ರವಾಗಿ ತಮ್ಮ ಗೂಡಿಗೆ ತೆಗೆದುಕೊಂಡು ಹೋಗುತ್ತವೆ. ಹಾಗೆಯೇ ಸಂಘಟನೆಯ ಕೆಲಸ ಸುಸೂತ್ರವಾಗಿ ನಡೆಯಬೇಕೆಂದರೆ ಸಂಘಟನೆಗೆ ಹೊಸ ಸದಸ್ಯರನ್ನು ಸೇರಿಸಿಕೊಳ್ಳುವುದು ಅತ್ಯಂತ ಅವಶ್ಯಕ.

ಇಂದಿನ ಕೊರೋನಾ ಕಾಲದಲ್ಲಿ ವೈಯಕ್ತಿಕ ಭೇಟಿ ಮಾಡಿ ಸದಸ್ಯರನ್ನಾಗಿಸುವುದು ಕಷ್ಟಸಾಧ್ಯವೆಂದು ಯೋಚಿಸಿ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಆನ್ಲೈನ್ ಸದಸ್ಯತ್ವ ಮಾಡಿಸಲು ಎಲ್ಲಾ ತಯಾರಿಯನ್ನು ಮಾಡಿಕೊಂಡಿದೆ. ಜಿಲ್ಲಾ ಪ್ರಮುಖರು ಸಂಘಟನೆಯು ನೀಡುವ ಎಲ್ಲಾ ಮಾಹಿತಿಗಳನ್ನು ಅಚ್ಚುಕಟ್ಟಾಗಿ ತಿಳಿದುಕೊಂಡು ಆನ್ಲೈನ್ ಸದಸ್ಯತ್ವವನ್ನು ಮಾಡಿಸಬೇಕೆಂದು ಈ ಮೂಲಕ ಮನವಿ ಮಾಡಲಾಗಿದೆ. ಆಫ್ಲೈನ್‌ನಲ್ಲಿಯೂ ಸದಸ್ಯತ್ವವನ್ನು ಮಾಡಲು ಅವಕಾಶವಿದೆ.

ಸಂಪಾದಕ

## ಸೂಕ್ತಿ



ಯಸ್ಯ ಸರ್ವೇ ಸಮಾರಂಭಾಃ ಕಾಮ ಸಂಕಲ್ಪ ವರ್ಜಿತಾಃ।
ಜಾನಾಗ್ನಿದಗ್ಧ ಕರ್ಮಾಣಂ ತಮಾಹುಃ ಪಂಡಿತಂ ಬುಧಾಃ ॥

'ಯಾವನ ಕರ್ಮಗಳೆಲ್ಲ ಕಾಮ ಸಂಕಲ್ಪಗಳಿಂದ ಬಿಡಲ್ಪಟ್ಟಿದೆಯೋ ಯಾವನ ಕರ್ಮಗಳು ಜ್ಞಾನವೆಂಬ ಅಗ್ನಿಯ ದ್ವಾರಾ ಸುಡಲ್ಪಟ್ಟಿದೆಯೋ ಅವನನ್ನು ಜ್ಞಾನಿಗಳು ಪಂಡಿತನೆಂದು ಹೇಳುವರು.'

- ಭಗವದ್ಗೀತೆ(ಅ-4;ಶ್ಲೊ-19)

## ಪರಿವಿಡಿ


- ನವೆಂಬರ್ ಸಂಕಲ್ಪ 3
- ದೀಪಾವಳಿ ವೈವಿಧ್ಯ 4
- ನಾವೂ ಹೀಗಾಗಬಹುದೇ? 5
- ಪಾಲಕರು, ಶಿಕ್ಷಕರು ಮತ್ತು ಸರ್ಕಾರಗಳ ಕರ್ತವ್ಯ 6
- ಭಾರತ ಪರಿಚಯ 8
- ಆನ್‌ಲೈನ್ ಶಿಕ್ಷಣ 9
- ವಿಶ್ವಗುರುವಾಗಿಸಲು ಹೊಸ ಶಿಕ್ಷಣ ನೀತಿ ಅವಶ್ಯ 11
- ಸರ್ಕಾರಿ ಆದೇಶ 12

# ವಿಶ್ವಗುರುವಾಗಿಸಲು ಹೊಸ ಶಿಕ್ಷಣ ನೀತಿ ಅವಶ್ಯ










ಹೊಸ ಶಿಕ್ಷಣ ನೀತಿ ಜಾರಿಗೊಳ್ಳುವುದರಿಂದ ದೇಶದ ಪರಿಸ್ಥಿತಿ ಬದಲಾಗುತ್ತದೆ. ಭಾರತವನ್ನು ವಿಶ್ವದ ಜಗದ್ಗುರುವಾಗಿಸುವತ್ತ ಹೊಸ ಶಿಕ್ಷಣ ನೀತಿ ಅವಶ್ಯ. ಮಕ್ಕಳು ಉದ್ಯೋಗ ಬಯಸುವ ಬದಲು ಅವರನ್ನು ಉದ್ಯೋಗದಾತರನ್ನಾಗಿ ತಯಾರುಗೊಳಿಸಬೇಕು ಎಂಬುದು ಕರ್ನಾಟಕದ ಹೊಸ ಶಿಕ್ಷಣ ನೀತಿ ಅಧ್ಯಯನ ಸಮಿತಿಯ ತಂಡದ ಸದಸ್ಯ ಹಾಗೂ ವಿಧಾನ ಪರಿಷತ್ ಸದಸ್ಯ ಅರುಣ ಶಹಾಪುರ ಹೇಳಿದರು.

ನಗರದ ವಿದ್ಯಾಗಿರಿ ಜೆಎಸ್‌ಎಸ್ ಉತ್ಸವ ಸಭಾಭವನದಲ್ಲಿ ವಿದ್ಯಾಭಾರತಿ ಕರ್ನಾಟಕ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ, ಜೆಎಸ್‌ಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ ಗುರುವಾರ ಏರ್ಪಡಿಸಿದ್ದ ಹೊಸ ರಾಷ್ಟ್ರೀಯ ಶಿಕ್ಷಣನೀತಿ-2020 ಎಂಬ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಹೊಸ ಶಿಕ್ಷಣ ನೀತಿ ಉದ್ಯೋಗದಾತರನ್ನು ರಚಿಸುವ ನೀತಿಯಾಗಲಿದೆ. ಇದರಲ್ಲಿ ಕೌಶಲ್ಯಾಧಾರಿತ ಶಿಕ್ಷಣಕ್ಕೆ ಅವಕಾಶವಿದ್ದು 10+2ರ ಬದಲಾಗಿ 5+3+3+5ರ ಪದ್ದತಿಯಲ್ಲಿ ಹೊಸ ಶಿಕ್ಷಣನೀತಿ ಜಾರಿಗೆ ಬರಲಿದೆ. ಮಾನವನನ್ನು ಸಂಪನ್ಮೂಲ ಎಂದು ನೋಡದೆ ಮಾನವನನ್ನಾಗಿ ನೋಡುವುದು ನೀತಿಯ ಉದ್ದೇಶ. ಭಾರತ ಹಾವಡಿಗರ, ಮೂಢನಂಬಿಕೆಗಳ ದೇಶ ಎನ್ನುವ ವಿದೇಶಿಗರ ಹೇಳಿಕೆಯನ್ನು ಸುಳ್ಳಾಗಿಸಲು ನೀತಿ ಸಹಕಾರಿಯಾಗಲಿದೆ ಎಂದರು.

ಪ್ರಜ್ಞಾ ಪ್ರವಾಹ ದಕ್ಷಿಣ ಮಧ್ಯ ಕ್ಷೇತ್ರದ ಸಂಯೋಜಕ ರಘುನಂದನ ಮಾತನಾಡಿ, ಮಕ್ಕಳಿಗೆ ಮೊದಲ 8 ವರ್ಷಗಳ ಶಿಕ್ಷಣ ಮಾತೃಭಾಷೆಯಲ್ಲಿರಬೇಕು. ಶಿಕ್ಷಕರು ಮೊದಲು ಬದಲಾವಣೆಗೆ ಒಗ್ಗಿಕೊಂಡು ಧನಾತ್ಮಕ ಭಾವನೆ ಬೆಳೆಸಿಕೊಳ್ಳುವ ಮೂಲಕ ಹೊಸ ಶಿಕ್ಷಣ ನೀತಿಯನ್ನು ಯಶಸ್ವಿಗೊಳಿಸಬೇಕೆಂದು ಹೇಳಿದರು.

ಡಿಡಿಪಿಐ ಮೋಹನ ಪಂಚಾಟೆ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನದ ಕುರಿತು ಮಾತನಾಡಿದರು.

ಜೆಎಸ್‌ಎಸ್ ಸಂಸ್ಥೆಯ ವಿತ್ತಾಧಿಕಾರಿ ಡಾ॥ ಅಜಿತ ಪ್ರಸಾದ ಮಾತೃಭಾಷೆಯಲ್ಲಿ ಶಿಕ್ಷಣ ಮುಖ್ಯ ಎಂದು ಪ್ರತಿಪಾದಿಸಿದರು. ರಾಜ್ಯ ವಿದ್ಯಾಭಾರತಿ ಪ್ರಮುಖ ಪರಮೇಶ್ವರ ಹೆಗಡೆ ಪ್ರಸ್ತಾವಿಕವಾಗಿ ಮಾತನಾಡಿದರು.

ವಿದ್ಯಾಭಾರತಿ ಜಿಲ್ಲಾಧ್ಯಕ್ಷ ಶಾಂತಣ್ಣ ಕಡಿವಾಲ ಅಧ್ಯಕ್ಷತೆ ವಹಿಸಿದ್ದರು. ಶ್ರೀಧರ ನಾಡಿಗೇರ, ಹರೀಶ ಗಲಗಲಿ, ಶ್ರೀಧರ ಪಾಟೀಲ ಕುಲಕರ್ಣಿ, ಇತರರಿದ್ದರು.

ಕೆಆರ್‌ಎಂಎಸ್‌ಎಸ್ ರಾಜ್ಯಾಧ್ಯಕ್ಷ ಡಾ॥ ರಘು ಅಕಮಂಚಿ ಸಂವಾದ ನಡೆಸಿಕೊಟ್ಟರು. ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷ ಸಂದೀಪ ಬೂದಿಹಾಳ ಸ್ವಾಗತಿಸಿದರು. ಅಶೋಕ ನಾಯಕ ವಂದಿಸಿದರು. ನೀಲಗಂಗಾ ಕರಿ ನಿರೂಪಿಸಿದರು.

12.11.2020ರ ಈ ಕಾರ್ಯಕ್ರಮದಲ್ಲಿ 52 ಸಂಸ್ಥೆಗಳಿಂದ 8 ಪೂರ್ವ ಪ್ರಾಥಮಿಕ ಶಾಲೆ ಶಿಕ್ಷಕರು, 23 ಪ್ರಾಥಮಿಕ ಶಾಲೆ ಶಿಕ್ಷಕರು, 110 ಪ್ರೌಢಶಾಲೆ ಶಿಕ್ಷಕರು, 44 ಪದವಿ ಪೂರ್ವ ಮಹಾವಿದ್ಯಾಲಯದ ಉಪನ್ಯಾಸಕರು, 53 ಪದವಿ ಕಾಲೇಜುಗಳ ಪ್ರಾಧ್ಯಾಪಕರು ಹಾಗೂ 38 ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಇಲಾಖೆ ಅಧಿಕಾರಿಗಳು ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿನಿಧಿಗಳು ಸೇರಿದಂತೆ ಒಟ್ಟು 276 ಪ್ರತಿನಿಧಿಗಳು ಭಾಗವಹಿಸಿದ್ದರು.

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-11-2020 Date of Posting 20th or 21st of every month Posted at Periodical Rate

## ಸರ್ಕಾರಿ ಆದೇಶ

## ವಿಷಯ: ಸರ್ಕಾರಿ ನೌಕರರು ಒಂದು ಬಾರಿಗೆ ಪಡೆಯಬಹುದಾದ ಗರಿಷ್ಠ ಸಾಂದರ್ಭಿಕ ರಜೆಯ ಮಿತಿಯನ್ನು ನಿರ್ಬಂಧಿಸುವ ಬಗ್ಗೆ

ಓದಲಾಗಿದೆ: 1. ಸರ್ಕಾರದ ಆದೇಶ ಸಂ.ಆಇ 16 ಎಸ್‌ಆರ್‌ಎ 89, ದಿನಾಂಕ:09–03–1989.

2. ಸರ್ಕಾರ ಅಧಿಸೂಚನೆ ಸಂ. ಸಿ.ಅಸುಇ 02 ಹೆಚ್‌ಹೆಚ್‌ಎಲ್ 2019, ದಿನಾಂಕ: 13–06–2019

ಪ್ರಸ್ತಾವನೆ :– ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ 15 ದಿವಸಗಳ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಲು ಆದೇಶಿಸಲಾಗಿತ್ತು. ನಂತರ, ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ 15 ದಿವಸಗಳ ಸಾಂದರ್ಭಿಕ ರಜೆಯನ್ನು 10 ದಿವಸಗಳಿಗೆ ಇಳಿಸಿ ಆದೇಶಿಸಲಾಗಿದೆ.

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ಅನುಬಂಧ–ಬಿ ಯ ನಿಯಮ (1)ರನ್ವಯ 15 ದಿನಗಳ ಸಾಂದರ್ಭಿಕ ರಜೆ ಚಾರಿಯಲ್ಲಿದ್ದ ಸಂದರ್ಭದಲ್ಲಿ ಒಂದು ಬಾರಿಗೆ ಪಡೆಯಬಹುದಾದ ಗರಿಷ್ಠ ಸಾಂದರ್ಭಿಕ ರಜೆಯ ಮಿತಿಯನ್ನು 7 ದಿನಗಳಿಗೆ ಸೀಮಿತಗೊಳಿಸಿ, ಸಾರ್ವತ್ರಿಕ ರಜೆಯೊಂದಿಗೆ ಸಂಯೋಜಿಸಿದಾಗ ಈ ಅವಧಿಯನ್ನು 10 ದಿವಸಗಳಿಗೆ ನಿರ್ಭಂದಿಸಿ ಅವಕಾಶ ಕಲ್ಪಿಸಲಾಗಿತ್ತು. ಮೇಲೆ ಓದಲಾದ (2)ರ ಆದೇಶದಲ್ಲಿ ಸಾಂದರ್ಭಿಕ ರಜೆಯನ್ನು 10 ದಿವಸಗಳಿಗೆ ಇಳಿಸಿರುವ ಹಿನ್ನೆಲೆಯಲ್ಲಿ ಒಂದು ಬಾರಿಗೆ ಪಡೆಯಬಹುದಾದ ಗರಿಷ್ಠ ಸಾಂದರ್ಭಿಕ ರಜೆಯನ್ನು 5 ದಿನಗಳೆಂದು ನಿರ್ಬಂಧಿಸಲು ಹಾಗೂ ಸಾರ್ವತ್ರಿಕ ರಜೆಯೊಂದಿಗೆ ಸಂಯೋಜಿಸಿದಾಗ ಈ ಅವಧಿಯನ್ನು 8 ದಿವಸಗಳಿಗೆ ನಿರ್ಭಂದಿಸಿ ಅವಕಾಶ ಕಲ್ಪಿಸಲು ನಿರ್ಧರಿಸಲಾಗಿದೆ. ಆದ್ದರಿಂದ, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

ಸರ್ಕಾರ ಆದೇಶ ಸಂಖ್ಯೆ: ಆಇ 03 ಸನಿತಿ 2020 (ಇ)ಬೆಂಗಳೂರು, ದಿನಾಂಕ: 15.10.2020

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ಅನುಬಂಧ–ಬಿ ಯಲ್ಲಿನ ಸಾಂದರ್ಭಿಕ ರಜೆಯ ಮಂಜೂರಾತಿ ಬಗ್ಗೆ ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು.

| ಕ್ರ.ಸಂ | ಪ್ರಸ್ತುತ ಅನುಬಂಧ–ಬಿ ಯಲ್ಲಿರುವ ಅವಕಾಶ | ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು |
|---|---|---|
| 1 | ಅನುಬಂಧ–ಬಿ ಯ ನಿಯಮ (1)ರಲ್ಲಿ ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ 15 ದಿನಗಳ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಬಹುದು. ಆದರೆ ಒಂದು ಬಾರಿಗೆ 7 ದಿನಗಳಿಗಿಂತ ಹೆಚ್ಚಿಗೆ ರಜೆ ಮಂಜೂರು ಮಾಡತಕ್ಕದ್ದಲ್ಲ. | ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ 10 ದಿನಗಳ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಬಹುದು. ಆದರೆ ಒಂದು ಬಾರಿಗೆ 5 ದಿನಗಳಿಗಿಂತ ಹೆಚ್ಚಿಗೆ ರಜೆ ಮಂಜೂರು ಮಾಡತಕ್ಕದ್ದಲ್ಲ. |
| 2 | ಅನುಬಂಧ–ಬಿ ಯ ನಿಯಮ (1) ರಲ್ಲಿನ ಟಿಪ್ಪಣಿಯಲ್ಲಿ ಬರುವ ಗೊತ್ತುಪಡಿಸಿದ 15 ದಿನಗಳ ಪರಿಮಿತಿಗೆ ಒಳಪಟ್ಟು | ಗೊತ್ತುಪಡಿಸಿದ 10 ದಿನಗಳ ಪರಿಮಿತಿಗೆ ಒಳಪಟ್ಟು |
| 3 | ಅನುಬಂಧ–ಬಿ ಯ ನಿಯಮ (2)ರಲ್ಲಿನ ಭಾನುವಾರ ಮತ್ತು ರಜಾ ದಿನಗಳನ್ನು ಬಿಟ್ಟು ಒಂದು ಗೈರು ಹಾಜರಿಯ ಅವಧಿಯಲ್ಲಿ ಏಳು ದಿನಗಳಿಗಿಂತ ಹೆಚ್ಚು ದಿನದ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡತಕ್ಕದ್ದಲ್ಲ. ಅಷ್ಟೇ ಅಲ್ಲದೆ, ಅಂಥ ಗೈರು ಹಾಜರಿಯ ಅವಧಿಯು ಯಾವ ಸಂದರ್ಭದಲ್ಲೂ ಹತ್ತು ದಿನಗಳಿಗೆ ಮೀರಬಾರದು. | ಭಾನುವಾರ ಮತ್ತು ರಜಾ ದಿನಗಳನ್ನು ಬಿಟ್ಟು ಒಂದು ಗೈರು ಹಾಜರಿಯ ಅವಧಿಯಲ್ಲಿ ಐದು (5)ದಿನಗಳಿಗಿಂತ ಹೆಚ್ಚು ದಿನದ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡತಕ್ಕದ್ದಲ್ಲ. ಅಷ್ಟೇ ಅಲ್ಲದೆ, ಅಂಥ ಗೈರು ಹಾಜರಿಯ ಅವಧಿಯು ಯಾವ ಸಂದರ್ಭದಲ್ಲೂ ಎಂಟು (8) ದಿನಗಳಿಗೆ ಮೀರಬಾರದು. |
| 4 | ಅನುಬಂಧ–ಬಿ ಯ ನಿಯಮ (4)ರಲ್ಲಿ ಬರುವ ಒಂದು ಬಾರಿಗೆ 7 ದಿನಗಳ ಪರಿಮಿತಿಯು | ಒಂದು ಬಾರಿಗೆ 5 ದಿನಗಳ ಪರಿಮಿತಿಯು |

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com